


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

SK NEWS ಕನ್ನಡ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

Volume : 07 | Issue : 98 | Thursday 19-12-2024 | E-mail : maruti.b.hosamani76@gmail.com | Page: 4 | Price : Rs. 1/-


## ಎಸ್ಸಿ/ಎಸ್ಟಿ ಅನುದಾನ ದುರ್ಬಳಕೆ ಪ್ರಭುರಾಜ ಕೊಡ್ಲಿಯಿಂದ ನಡೆಯುತ್ತಿರುವ ಧರಣಿ ಸತ್ಯಾಗ್ರಹ




**ಮಾನ್ವಿ :** ಪ್ರಭುರಾಜ ಕೊಡ್ಲಿ ಹಮ್ಮಿಕೊಂಡಿರುವ ಹೋರಾಟದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅನುದಾನ ದುರ್ಬಳಕೆ ಯಾಗುತ್ತಿರುವ ಆರೋಪ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ನಟರಾಜ ರಿಂದ ಬಟಾಬಯಲಾ ಗಿರುವುದು ಬೆಳಕಿಗೆ ಬಂದಿದೆ.

ಮಾನ್ವಿ ತಾಲೂಕಿನಲ್ಲಿ ನಡೆಯುತ್ತಿರುವ ಕಾಮಗಾರಿಯ ನಿಯಮಗಳೆ ಬದಲಿಸಿ ಅಧಿಕಾರಿಗಳಿಗೆ ರಾಜಕಾರಣಿಗಳು ಒತ್ತಡ ಏರುತ್ತಿದ್ದ ರಿಂದ ಎಸ್ಸಿ/ಎಸ್ಟಿ ಅನುದಾನ ದುರ್ಬಳಕೆ ಯಾಗುತ್ತಿದೆ ಪ್ರತಿಭಟನೆ ನಡೆಯುತ್ತಿರುವ ಸ್ಥಳದಲ್ಲಿಯೇ ಬಯಲಾಗಿದೆ.

ಮಾನ್ವಿ ಅಭಿವೃದ್ಧಿ ಯಾಗಬೇಕು, ಆದರೆ ರಾಜಕಾರಣಿಗಳ ಕುತಂತ್ರದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗಕ್ಕೆ ಮುಟ್ಟ ಬೇಕಾದ ಅನುದಾನ ಬೇರೆ ಉದ್ದೇಶಕ್ಕಾಗಿ ಬಳಕೆ ಯಾಗಿರುವುದು ನೋಡಿ-ದರೆ ಉನ್ನತ ಮಟ್ಟದ ಅಧಿಕಾರಿಗಳು ತನಿಖೆ ಮಾಡಬೇಕು ಎಂಬ ಒತ್ತಾಯ ಕೇಳಿ ಬರುತ್ತಿವೆ ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಕಾರ್ಖಾನೆಯಿಂದ ರೈತರಿಗಾಗುವ ಸಮಸ್ಯೆ ಬಗೆಹರಿಸುವಂತೆ ಸಿ.ಇ.ಓ ಅವರಿಗೆ ಮನವಿ





**ನಾದ ಕೆ.ಡಿ :** ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ನಾದ ಕೆಡಿ ಗ್ರಾಮ ವ್ಯಾಪ್ತಿಗೆ ಸಂಬಂಧಿಸಿದ ಜಮಖಂಡಿ ಸುಗ-'ರ್ ಕಾರ್ಖಾನೆಯ ಅನೇಕ ಸಮಸ್ಯೆಗಳಿಂದ ಬೇಸತ್ತು ರೈತರು ಕಾರ್ಖಾನೆ ಪ್ರಾರಂಭದ ತಳಹದಿ ಯಿಂದಲೂ ಸುತ್ತ ಮುತ್ತಲಿನ ರೈತರ ಜಮೀನುಗಳ ಬೆಳೆ, ಆರೋಗ್ಯ, ಸಾಕು ಪ್ರಾಣಿಗಳ ಮೇಲೆ ಕಾರ್ಖಾನೆ ಧೂಳಿನಿಂದಾಗಿ, ರಸ್ತೆಗಳ ಅವ್ಯವಸ್ಥೆಗೆ ಅನೇಕ ಸಮಸ್ಯೆಗಳಿಂದ ನೊಂದ ರೈತರು ಸಂಬಂಧಿಸಿದ ಕಾರ್ಖಾನೆಯ ಅಧಿಕಾರಿಗಳ ಗಮನಕ್ಕೂ ತಂದರು ಇನ್ನೂವರೆಗೆ ಯಾವುದೇ ಸಮಸ್ಯ ಬಗೆ ಹರಿದಿರುವುದಿಲ್ಲ ಇಂತಹ ದುಷ್ಪರಿಣಾಮ ಕುರಿತು ಸರ್ಕಾರ ಈ ಕಾರ್ಖಾನೆ ಕಾಯ್ದೆಯಡಿ ಕಾನೂನು ಕ್ರಮ ಕೈಗೊಳ್ಳಬೇಕು.

ರೈತರಿ ಗಾಗುವ ಸಮಸ್ಯೆಗಳನ್ನು ಬಗೆ ಹರಿಸಬೇಕು. ಕಾರ್ಖಾನೆಗೆ ಸಂಬಂಧಿಸಿದ ರಸ್ತೆಗಳ ಕುರಿತು ಮಾಲೀಕರಿಗೆ ನೋಟಿಸ್ ಜಾರಿಗೊಳಿಸ ಬೇಕು.

ಕಾರ್ಮಿಕರಿಗೆ ಸಿಗುವ ಸರ್ಕಾರದ ಕಾಯ್ದೆ ಪ್ರಕಾರ ಕನಿಷ್ಠ ವೇತನ ಪ್ರತಿಯೊಬ್ಬರಿಗು ಸಿಗುವಂತಾಗ ಬೇಕು. ಶಬ್ದ ಮಾಲಿನ್ಯ ತಡೆಯುವ ವ್ಯವಸ್ಥೆ ಮಾಡಬೇಕು. ಸುತ್ತ-ಮುತ್ತಲೂ ಗ್ರಾಮಗಳ ಮೇಲೆ ಚಿಕ್ಕ-ಚಿಕ್ಕ ಧೂಳು ಬರದಂತೆ ಎಚ್ಚರಿಕೆ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಬೇಕೆಂದು. ಗ್ರಾಮಸ್ಥರು ಇಂದು ಕಾರ್ಖಾನೆಯ ಸಿ.ಇ.ಓ ಅವರಿಗೆ ಮನವಿ ಸಲ್ಲಿಸಿದರು. ಒಂದು ವೇಳೆ ಸಮಸ್ಯೆ ಬೇಗನೆ ಬಗೆ ಹರಿಯದಿದ್ದರೆ ಕಾರ್ಖಾನೆಯ ಎದುರು ಅನಿರ್ದಿಷ್ಟಾವಧಿ ವರೆಗೆ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ-ಯ ಮನವಿಯನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಆರ್.ಪಿ.ಐ (ಅಂಬೇಡ್ಕರ್) ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಗಳಾದ ಶಿವಾನಂದ ಹರಿಜನ. ಪ್ರಗತಿಪರ ರೈತರಾದ ಶ್ರೀ ಜಡದಾರಿ ಪಾಟೀಲ. ಸುರೇಶ ಹಿರೇಮಠ. ಪುಂಡಲಿಕ ಕೆರುಟಗಿ. ಸಂತೋಷ .ಡಂಗಿ. ಕೇದಾರ ಬಿರಾದಾರ. ನಿಂಗಪ್ಪ.ಡಂಗಿ. ಕನ್ನಗೊಂಡ.ಡಂಗಿ. ಸಿದ್ದು ಕೆರುಟಗಿ. ಯಲ್ಲಪ್ಪ.ಕೆರುಟಗಿ. ಗಂಗಪ್ಪ. ಕೆರುಟಗಿ. ಇತರರು ಭಾಗವಹಿಸಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಶಿವಪ್ಪ.ಬಿ. ಹರಿಜನ.**
**ಇಂಡಿ.ವಿಜಯಪುರ ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕೆ.ಹೊಸಹಳ್ಳಿ**

## ಗಿನ್ನಿಸ್ ದಾಖಲೆ ಪಟ್ಟಿಗೆ, ಕುಮಾರಿ ಆರಾಧನ ಸುಭೋದ ರಾಬಾ – ಹೆಸರು ಸೇರ್ಪಡೆ




**ರೋಣ :** ಪಟ್ಟಣದ ಗ್ರೀನವುಡ್ ಇಂಟರ್ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಯ 5 ನೇ. ತರಗತಿಯ ವಿದ್ಯಾರ್ಥಿನಿಯಾದ ಕುಮಾರಿ ಆರಾಧನ ಸುಭೋದ ರಾಭ ಬೆಂಗಳೂರಿನಲ್ಲಿ ನಡೆದ ಆರ್ಟ್ ಕಲ್ಚರಲ್ ಎಜುಕೇಷನಲ್ ಎನ್ಲೈಟ್ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಹೈ ರೇಂಜ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ಲ್ಲಿ ಭಾಗವಹಿಸಿ ಪ್ರಾಚೀನ ಕಾಲದ ಗಂಧರ್ವ ವಿದ್ಯಾ ಈಗಿನ ಮೈಂಡ್ ಮಿರಾಕಲ್ ವಿದ್ಯೆಯನ್ನು ಗೋಕುಲ ಧಾಮ ಮಂಗಳೂರಿನ ಮಾತಾ ರೂಪಶ್ರೀ ಜಿ ಗುಡ್ಡದ ಅವರಲ್ಲಿ ತರಬೇತಿ ಪಡೆದು ಕಣ್ಣು ಮುಚ್ಚಿಕೊಂಡು ನಾಲ್ಕು ಬಣ್ಣಗಳ ವಿಂಗಡಣೆ ಹಾಗೂ ಚಿತ್ರಗಳಿಗೆ ಬಣ್ಣ ತುಂಬುವದು ಮತ್ತು ಓದುವುದು ಬರೆಯುವುದನ್ನು ಕೇವಲ 6 ನಿಮಿಷದಲ್ಲಿ ಪೂರ್ಣ ಗೊಳಿಸುವ ಮೂಲಕ ಗಿನ್ನಿಸ್ ದಾಖಲೆ ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದಾಳೆ.

ಸಾಧನೆ ಮಾಡಿದ ವಿದ್ಯಾರ್ಥಿನಿಗೆ ಶಾಲೆಯ ಅಧ್ಯಕ್ಷರಾದ ಶ್ರೀ ಅವಿನಾಶ್ ಸಾಲಿಮನಿ ಮುಖ್ಯೋಪಾಧ್ಯಾಯರಾದ ಶ್ರೀಮತಿ ಸುನೀತಾ ರಾಬಾ ಶ್ರೀ ಮಹೇಶ ಅಚ್ಚಿನಗೌಡ್ರ ಶಾಲೆಯ ಶಿಕ್ಷಕ, ಶಿಕ್ಷಕಿಯರ ವರ್ಗ ಹಾಗೂ ಚಾಲಕರ ವೃಂದ ಅಭಿನಂದನೆ ತಿಳಿಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ ರೋಣ**

## ಮನೆ, ಬೈಕ್ ಕಳ್ಳತನ, ದರೋಡೆ ಯತ್ನ: ಐವರು ಬಂಧನ



**ಬಾಗಲಕೋಟೆ :** ನವನಗರದ ವಿದ್ಯಾಗಿರಿ ಪ್ರದೇಶದಲ್ಲಿ ರಾತ್ರಿ ಹಗಲು ಕನ್ನಾ, ಮನೆ ಕಳ್ಳತನ ಮತ್ತು ತಾಲೂಕಿನ ರಾಂಪೂರ ಗ್ರಾಮದಲ್ಲಿ ಬ್ಯಾಂಕ್ ದರೋಡೆ ಯತ್ನ ನಡೆದಿದ್ದು, ಬಾಗಲಕೋಟೆ ಪೊಲೀಸರು ಐವರು ಆರೋಪಿಗಳನ್ನುಬಂಧಿಸುವಲ್ಲಿಯಶಸ್ವಿಯಾಗಿದ್ದಾರೆ.

**ಘಟನೆ ವಿವರ:** ನವನಗರ ಮತ್ತು ನವನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಈ ಘಟನೆಯಲ್ಲಿ ಮನೆ ಕಳ್ಳತನ, ಮೋಟಾರ್ ಸೈಕಲ್ ಕಳವು, ಭಗವತಿ ಗ್ರಾಮದ ಕೋನಮ್ಮ ದೇವಿ ದೇವಸ್ಥಾನದ ಹುಂಡಿ ಕಳ್ಳತನ ಮತ್ತು ರಾಂಪೂರ ಗ್ರಾಮದಲ್ಲಿ ಕರ್ನಾಟಕ ವಿಕಾಸ್ ಗ್ರಾಮೀಣ ಬ್ಯಾಂಕಿನ ಬೀಗ ಮುರಿದು ಸ್ಟ್ರಾಂಗ್ ರೂಮ್ ಬಾಗಿಲನ್ನು ಗ್ಯಾಸ್ ಕಟರ್ ಬಳಸಿ ದರೋಡೆಗೆ ಯತ್ನ ನಡೆದಿದೆ.

ಎಸ್ಪಿ ಅಮರನಾಥ ರೆಡ್ಡಿ ಮತ್ತು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳ ಮಾರ್ಗದರ್ಶನದಲ್ಲಿ ಬಾಗಲಕೋಟೆ ಗ್ರಾಮಾಂತರ ಹಾಗೂ ನವನಗರ ಪೋಲಿಸರು ಪ್ರಕರಣವನ್ನು ಕಡಿಮೆ ಅವಧಿಯಲ್ಲಿ ಭೇದಿಸಿ, ಐದು ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಿಂದ 81 ಗ್ರಾಂ ಬಂಗಾರ, 800 ಗ್ರಾಂ ಬೆಳ್ಳಿ ಆಭರಣ, ಕಳ್ಳತನಕ್ಕೆ ಬಳಸಿದ ಮೋಟಾರ್ ಸೈಕಲ್ ಮತ್ತು ಆಟೋವನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರಕರಣವನ್ನು ಯಶಸ್ವಿಯಾಗಿ ಭೇದಿಸಿದ ಅಧಿಕಾ-ರಿಗಳು ಮತ್ತು ಸಿಬ್ಬಂದಿಯವರನ್ನು ಬಾಗಲಕೋಟೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಶ್ಲಾಘಿಸಿದ್ದಾರೆ ಮತ್ತು ಅವರಿಗೆ ಬಹುಮಾನವನ್ನು ಘೋಷಿಸಿದ್ದಾರೆ.

## ರೈತರ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಬದ್ಧ: ಜಿ.ಪಿ. ಪಾಟೀಲ

**ಧಾರವಾಡ :** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಬೆಂಗಳೂರು ಹಾಗೂ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್,ಧಾರವಾಡ ಇವರುಗಳ ಸಂಯುಕ್ತ ಆಶ್ರಯದಲ್ಲಿ ಇತ್ತೀಚೆಗೆ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿ., (KMF) ತರಬೇತಿ ಕೇಂದ್ರ, ರಾಯಾಪುರ, ಧಾರವಾಡದಲ್ಲಿ "ಕರ್ನಾಟಕ ರಾಜ್ಯ ಉಗ್ರಾಣದ ಅಧಿಕಾ-ರಿಗಳು/ಸಿಬ್ಬಂದಿಗಳಿಗೆ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಜಿ.ಪಿ. ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಕಲಿಕೆಗೆ ಕೊನೆ ಎಂಬುವುದು ಇಲ್ಲ ಅದು ಹರಿಯುವ ನೀರಾಗಿದೆ. ಸಹಕಾರ ಮತ್ತು ಉಗ್ರಾಣ ನಿಗಮ ಬೇರೆ ಬೇರೆ ಎಂಬುದಿಲ್ಲ. ಇವು ಎರಡರ ಉದ್ದೇಶ ಒಂದೇ. ರೈತರ ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಮಾಡುವುದಾಗಿದೆ. ನಾವೆಲ್ಲರೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕಾದರೆ ತರಬೇತಿ ಎನ್ನವುದು ಅವಶ್ಯಕವಾಗಿದೆ. ಹಾಗಾಗಿ ಎಲ್ಲಾ ಅಧಿಕಾರಿಗಳು ಹೊಸಹೊಸ ವಿಷಯಗಳನ್ನು ತಿಳಿದುಕೊಂಡು ವೃತ್ತಿಪರತೆಯಿಂದ



ಕಾರ್ಯನಿರ್ವಹಿಸಬೇಕು. ಇದರಿಂದ ರೈತರಿಗೆ ಉತ್ತಮ ಸೇವೆ ಕೊಡಲು ಸಾಧ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಬಸವರಾಜ ನೀ. ಅರಬಗೊಂಡ ಮಾತನಾಡಿ ಇಂದಿನ ಪೈಪೋಟಿ ಯುಗದಲ್ಲಿ ಸಹಕಾರ ಕ್ಷೇತ್ರವು ಎಲ್ಲಾ ಸಂಪನ್ಮೂಲಗಳನ್ನು ಸರಿಯಾಗಿ ಉಪಯೋಗಿಸಿಕೊಂಡು ಖಾಸಗಿ ಕ್ಷೇತ್ರದ ಜೊತೆ ಪೈಪೋಟಿ ಎದುರಿಸಬೇಕಾಗಿದೆ. ಅದಕ್ಕಾಗಿ ತರಬೇತಿ ಎನ್ನುವುದು ಅವಶ್ಯಕವಾಗಿದೆ. ವೃತ್ತಿಕೌಶಲ್ಯವನ್ನು ತರಬೇತಿ ಮೂಲಕ ಪಡೆದುಕೊಂಡು ಕಾರ್ಯನಿರ್ವಹಿಸಿದಾಗ ಮಾತ್ರ ಅಭಿವೃದ್ಧಿ ಸಾಧ್ಯ ಎಂದರು.

ಅವರು ಮುಂದುವರೆದು ಮಾತನಾಡುತ್ತಾ ರೈತರುಬೆಳೆದಬೆಳೆಯನ್ನುಬೆಲೆಬರುವವರೆಗೆ ರೈತರು ಸಂಗ್ರಹಿಸಿ ಇಡಬೇಕಾದರೆ ವ್ಯವಸ್ಥೆ ಉಗ್ರಾಣಗಳು ಬೇಕು. ಆ ವ್ಯವಸ್ಥೆಯನ್ನು ಉಗ್ರಾಣದ ಅಧಿಕಾರಿಗಳು ಬೆಳೆದ ಫಸಲನ್ನು ಇಡಬೇಕಾದರೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರಬೇಕು. ಅದಕ್ಕಾಗಿ ಕರ್ನಾಟಕರಾಜ್ಯಸಹಕಾರಮಹಾಮಂಡಳವು ದೂರ ದೃಷ್ಠಿ ಇಟ್ಟುಕೊಂಡು ಹೊಸ ಹೊಸ ತರಬೇತಿಯನ್ನು ಆಯೋಜಿಸಿ, ವೃತ್ತಿಕೌಶಲ್ಯವನ್ನು ನೀಡುತ್ತ ಬರುತ್ತಿದೆ ಎಂದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಬಾಪೂಗೌಡ ಡಿ. ಪಾಟೀಲ ಮಾತನಾಡಿ ಒಂದು ಸಹಕಾರ ಸಂಘ ಉತ್ತಮವಾಗಿ ಕಾರ್ಯನಿರ್ವಹಿಸಬೇಕಾದರೆ ಎಲ್ಲಾ ಸಿಬ್ಬಂದಿಗಳು ಗುಂಪಾಗಿ ಕೆಲಸ ನಿರ್ವಹಿಸುವುದು, ಪ್ರಾಮಾಣಿಕತೆಯಿಂದ ಯಾವುದೇ ಕಾರ್ಯವನ್ನು ಒಗ್ಗಟ್ಟಿನಿಂದ ಚರ್ಚೆ ಮಾಡಿ ಕಾರ್ಯನಿರ್ವಹಿಸಬೇಕು ಎಂದರು. ಅದಕ್ಕಾಗಿ ಹೆಚ್ಚು ಹೆಚ್ಚು ತರಬೇತಿ ಪಡೆದು ತಮ್ಮ ಕಾರ್ಯದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಹಾಯಕ ಯೋಜನಾಧಿಕಾ-ರಿಯಾದ ಆನಂದ ತಳವಾರ ಹಾಗೂ ಉಪನ್ಯಾಸಕರಾದ ಮಾನಸಿಕ ರೋಗ ತಜ್ಞರಾದ ಡಾ. ಆನಂದ ಪಾಂಡುರಂಗಿ ರವರು ಒತ್ತಡ ನಿರ್ವಹಣೆ ಹಾಗೂ ನಾಗರತ್ನ ಬಿ ಹೂಗಾರ ಪ್ರಾಂಶುಪಾಲರು, ಜಿಲ್ಲಾ ತರಬೇತಿ ಸಂಸ್ಥೆ, ಧಾರವಾಡ ರವರು ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು-2021 ಮತ್ತು ರಜಾ ನಿಯಮಗಳು ಹಾಗೂ ಡಾ:ಕಿರಣ್‌ದಾಸನಾಳ್‌ಕೃಷಿವಿಶ್ವವಿದ್ಯಾಲಯ ಧಾರವಾಡ ರವರು ಉಗ್ರಾಣ ನಿರ್ವಹಣೆ ಮತ್ತು ತಾಂತಿಕ ಅಂಶಗಳ ಬಗ್ಗೆ ಅಂಶಗಳ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕೆ.ಐ.ಸಿ.ಎಂ.ನ ಪ್ರಾಂಶುಪಾಲರಾದ ಡಿ.ಆರ್.ವೆಂಕಟರಾಮು ಸ್ವಾಗತ ಮಾಡಿದರು. ಪ್ರಾರ್ಥನೆಯನ್ನು ಆರತಿ ದೇವಶಿಕಾಮಣಿ, ಕಾರ್ಯಕ್ರಮದ ನಿರೂಪಣೆಯನ್ನು ಉಪನ್ಯಾಸಕರಾದ ರೂಪಾ.ಆರ್.ಪಾಟೀಲ ಹಾಗೂ ಗೀತಾ ಕೋಣನವರ ವಂದನಾರ್ಪಣೆ ಮಾಡಿದರು.

## ಮಾನವ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿರಿ



**ಬಾಗಲಕೋಟ :** ಮನುಷ್ಯನ ಬದುಕಿಗಾಗಿ ಮತ್ತು ಅವನ ಅಸ್ತಿತ್ವಕ್ಕಾಗಿ ಇರುವ ಮಾನವ ಹಕ್ಕುಗಳ ಬಗ್ಗೆ ಜನತೆಯಲ್ಲಿಅ-ರಿವನ್ನುಂಟು ಮಾಡುವಲ್ಲಿ ವಿದ್ಯಾರ್ಥಿಗಳು ಮಹತ್ವದ ಪಾತ್ರವನ್ನು ವಹಿಸಬೇಕು ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ಹೇಳಿದರು.

ಇಲ್ಲಿನ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್. ನರಸಾಪೂರ ಕಲಾ ಹಾಗೂ ಎಂ.ಬಿ. ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಐಕ್ಯೂ-ಎಸಿ,ರಾಜ್ಯಶಾಸ್ತ್ರ ವಿಭಾಗ ಮತ್ತು ಮಾನವ ಹಕ್ಕುಗಳ ಸಂರಕ್ಷಣಾಕೋಶ,ವಿಶ್ವಮಾನವಹಕ್ಕುಗಳದಿನಾಚರಣೆ ಅಂಗವಾಗಿ ಹಮ್ಮಿಕೊಂಡಜಾಗೃತಿಜಾಥಾಕ್ಕೆ ಚಾಲನೆ ನೀಡಿಅವರು ಮಾತನಾಡಿದರು.

ಸಂವಿಧಾನವುಎಲ್ಲರಿಗೂ ಸಮಾನತೆ ಹಾಗೂ ಹಲವು ಹಕ್ಕುಗಳನ್ನು ನೀಡಿದೆ. ಅವುಗಳನ್ನು ಗೌರವಿಸಬೇಕು. ಅವುಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು. ಮಾನವ ಹಕ್ಕುಗಳ ರಕ್ಷಣೆಗೆ ಮೀಸಲಿರುವ ಈ ದಿನಾಚರಣೆಯ ಹಿಂದಿನ ಆಶಯವನ್ನುಅರಿತುಅದನ್ನು ಸಾಕಾರಗೊಳಿಸಬೇಕು ಎಂದರು.

ಸಂಯೋಜಕಿ ಕೀರ್ತಿ ದಾಸರ, ಜನತೆಗಿರುವ ಮೂಲಭೂತ ಹಕ್ಕು ಮತ್ತು ಸ್ವಾತಂತ್ರ್ಯಗಳ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನಾಚರಣೆಯಉ-ದ್ದೇಶವಾಗಿದೆ. ವಿಶ್ವಸಂಸ್ಥೆಯು 1948ರಲ್ಲಿ ಈ ದಿನಾಚರಣೆಗೆಅನುಮೋದನೆ ನೀಡಿತು ಎಂದರು.

ವಿದ್ಯಾರ್ಥಿಗಳಾದ ದಿವ್ಯಶ್ರೀ ಬಿಲ್ಲಾರ, ಶ್ರವಣಾ ಸಿದ್ನಾಳ,ಕಾವೇರಿಕಿರಸೂರ, ಸಂಗಯ್ಯ ಸಾರಂಗಮಠ,ಮುತ್ತವ್ವಮನಗೂಳಿ ಹಾಗೂ ರಿಯಾಜ ಪಿಂಜಾರ ಹಲವು ಹಕ್ಕುಗಳ ಬಗ್ಗೆ ತಮ್ಮ ಅನಿಸಿಕೆ ಹೇಳಿದರು. ಕಾಲೇಜಿನಆವರಣದಲ್ಲಿ ನಡೆದ ಜಾಥ-ಾದಲ್ಲಿ ಹಲವು ಘೋಷಣೆಗಳೊಂದಿಗೆ ವಿದ್ಯಾರ್ಥಿಗಳು ಸಾಗಿಬಂದರು. ಐಕ್ಯೂಎಸಿ ಸಂಯೋಜಕಡಾ.ಎಸ್. ಎಸ್.ಹಂಗರಗಿ ವಂದಿಸಿದರು.

ಕಾರ್ಯಕ್ರಮಕ್ಕೂ ಮೊದಲು, ರಾಜ್ಯದ ಮಾಜಿ ಮುಖ್ಯಮಂತ್ರಿಎಸ್.ಎಂ.ಕೃಷ್ಣಅವರ ನಿಧನಕ್ಕೆ ಸಂತಾಪ ಸೂಚಿಸಿ ಎರಡು ನಿಮಿಷ ಮೌನವನ್ನುಆಚ-ರಿಸಲಾಯಿತು.

## "ಸಂಗಮಸಿರಿ" ಪ್ರಶಸ್ತಿ ಪ್ರದಾನ

**ಹುಬ್ಬಳ್ಳಿ :** ನಾಡಿನ ಹಿರಿಯ ಸಾಹಿತಿ ,ಕನ್ನಡ ಸಾಹಿತ್ಯ ಲೋಕಕ್ಕೆ 50ಕ್ಕೂ ಹೆಚ್ಚು ಕೃತಿಗಳನ್ನು ನೀಡಿದ ಡಾ. ಸಂಗಮೇಶ ಹಂಡಿಗಿ ಅವರ ನೆನಪಿನಲ್ಲಿಆರಂಭಗೊಂಡಡಾ.ಸಂಗಮೇಶ ಹಂಡಿಗಿ ಸಾಹಿತ್ಯ ಪ್ರತಿಷ್ಠಾನದಿಂದ "ಸಂಗಮ ಸಿರಿ" ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭ ಗೋಕುಲ್ ರಸ್ತೆಯ ಬ್ರೈಟ್ ಬ್ಯುಸಿನೆಸ್ ಸ್ಕೂಲ್ ಸಭಾಭವನದಲ್ಲಿ ನಡೆಯಿತು .

ಮೂರನೆ "ಸಂಗಮ ಸಿರಿ"ಪ್ರಶಸ್ತಿಯು ಕಾವ್ಯ ವಿಭಾಗದಲ್ಲಿ ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಶಿವರ ಗ್ರಾಮದ ಡಾ. ಎಸ್ .ಕೆ. ಮಂಜುನಾಥ್ ಅವರ "ಗಾಳಿಯ ಎದೆ ಸೀಳಿ ಹೊರಟ ಹಕ್ಕಿ, "ಕೃತಿ" ಗೆ ಪ್ರಶಸ್ತಿಗೆ ಪ್ರದಾನ ಮಾಡಲಾಯಿತು. ಸಾನಿಧ್ಯ ವಹಿಸಿದ ಭೈರನಟ್ಟಿ ದೊರೆಸ್ವಾಮಿ ಮಠ,ಶಿರೋಳ ತೋಂಟ ದಾರ್ಯ ಮಠದ ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ಮಾತನಾಡಿ,ಸಾಹಿತಿಗಳು ಅಕ್ಷರ ಕಟ್ಟಬಾರದು, ಸಮಾಜದಲ್ಲಿನ ಮೌಲ್ಯಗಳನ್ನು ಬಿತ್ತುವ ಸಾಹಿತ್ಯ ಇಂದಿನ ತುರ್ತು ಅಗತ್ಯ. ಸಾಹಿತ್ಯ ನಮ್ಮ ಮನಸ್ಸನ್ನು ಅರಳಿಸುವಂತಿರಬೇಕು. ಕವಿ ತನ್ನ ಕಷ್ಟವೇ ಇರಲಿ ಸುಖವೇ ಇರಲಿ ತನ್ನ ಅನುಭವವನ್ನು ಹಂಚಿಕೊಳ್ಳುತ್ತಾನೆ .ಮನುಷ್ಯನ ಮನಸ್ಸು ಅನಂತ ಭಾವಗಳ ಅಕ್ಷಯ ಪಾತ್ರೆ ಎಂದು ಹೇಳಿದರು. ಪ್ರಶಸ್ತಿ ಪುರಸ್ಕೃತ ಡಾ.ಎಸ್. ಕೆ. ಮಂಜುನಾಥ್ ಮಾತನಾಡಿ, ನಾನು ಕವಿಯಾಗಬೇಕೆಂದು ಕವಿತೆ ಬರೆಯಲಿಲ್ಲ. ಒಂದು ಸಂಕಲನ ಬಂದ ನಂತರ ಹಲವು ವರ್ಷಗಳ ಕಾಲ ತಡೆದು ಈ ಕೃತಿಯನ್ನು ಹೊರಗೆ ತಂದೆ. ಇದಕ್ಕೆ ಪ್ರಶಸ್ತಿ ಸಿಕ್ಕಿದ್ದು ನನ್ನ ಸಂತೋಷವನ್ನು ಇಮ್ಮಡಿಗೊಳಿಸಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಅಧ್ಯಕ್ಷ ಜಿ. ಬಿ. ಗೌಡಪ್ಪಗೋಳ ಮಾತನಾಡಿ, ಗುರುವಿನ ಮಾತು ಯುವಕರಿಗೆ ಚಿಂತನೆ ಹಚ್ಚುವ ವಿಚಾರಗಳು ಇರಬೇಕು. ಹೀಗಿದ್ದಾಗ ಮಾತ್ರ ಉತ್ತಮ ಶಿಷ್ಯಬಳಗ ಬೆಳೆಯಲು ಸಾಧ್ಯ. ನಮಗೆಲ್ಲ ಉತ್ತಮ ಶಿಕ್ಷಕ ಬಳಗ ಸಿಕ್ಕಿದ್ದರಿಂದ ಇಂದು ನಾವು ಉನ್ನತ ಮಟ್ಟಕ್ಕೆ ಬೆಳೆಯಲು ಸಾಧ್ಯವಾಯಿತು ಎಂದು ಹೇಳಿ ತಮ್ಮ ಹಾಗೂ ಡಾ.ಸಂಗಮೇಶ ಹಂಡಿಗಿ ಅವರ ಒಡನಾಟವನ್ನು ನೆನಪಿಸಿಕೊಂಡರು. ಕೃತಿ ಕುರಿತು ಹಿರಿಯ ಸಾಹಿತಿ ಮಹಾಂತಪ್ಪ ನಂದೂರು ಮಾತನಾಡಿ, ರಾಜ್ಯಾದ್ಯಂತ ಹಿರಿ ಕಿರಿಯ ಕವಿಗಳನ್ನು ಒಳಗೊಂಡ 86 ಕೃತಿಗಳು ಬಂದಿದ್ದವು. ಇಂದು ಬರೆದಿದ್ದೆಲ್ಲ ಕವಿತೆ ಎಂಬ ಭಾವನೆಯಲ್ಲಿ ಬರಹಗಾರ ಇರಬಾರದು. ನಮ್ಮ ಬರಹ ಎಷ್ಟರಮಟ್ಟಿಗೆ ಯೋಗ್ಯತೆ ಇದೆ ಎಂಬ ಅರಿವು ಇಟ್ಟುಕೊಂಡು ಬರೆದರೆ ಉತ್ತಮ ಕಾವ್ಯ ಹೊರಬರಲು ಸಾಧ್ಯವಾಗುತ್ತದೆ. ಈ ಪ್ರಶಸ್ತಿ ಆಯ್ಕೆಗೆ ಮೂರು ಹಂತಗಳನ್ನು ಮಾಡಿ ಸೋಸಿ ಅಂತಿಮವಾಗಿ ಮೂರು ಕೃತಿಗಳನ್ನು ಆಯ್ಕೆ ಮಾಡಿಕೊಡಲಾಯಿತು. ಅದರಲ್ಲಿ ಮಂಜುನಾಥವರು ಕೃತಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಯಿತು ಎಂದು ಹೇಳಿದರು . ಅತಿಥಿಯಾಗಿ ಬ್ರೈಟ್ ಎಜ್ಯುಕೇಶನ್ ಟ್ರಸ್ಟ್ ಕಾರ್ಯದರ್ಶಿ ಬಿ.ಎಲ್. ಲಿಂಗಶೆಟ್ಟರ್ ಆಗಮಿಸಿದ್ದರು.ಇದೇ ಸಂದರ್ಭದಲ್ಲಿ ಗೌರವ ಸನ್ಮಾನ ಸ್ವೀಕರಿಸಿದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಐ .ಎಂ. ವಲ್ಲೇಪ್ಪನವರು, ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ರಾಮಮೂಲಗಿ ಜಾನಪದ ಹಾಡುಗಳ ಮೂಲಕ ಮನರಂಜಿಸಿದರು. ಇದೇ



ಸಂದರ್ಭದಲ್ಲಿ ನಟ ಹಾಗೂ ಚಿತ್ರ ನಿರ್ಮಾಪಕ ಜೆ.ಜಿ. ಸಂಸ್ಥಾನ ಮಠ ,ಬೆಂಗಳೂರಿನ ವಾಣಿಜ್ಯ ಕಲಾವಿದ ಗೋಪಾಲ್ ಮನುವಾಚಾರ್ಯ ಹಾಗೂ ಗಿನ್ನಿಸ ದಾಖಲೆ ಮಾಡಿದ ಸ್ತುತಿ ಕುಲಕರ್ಣಿ ಅವರನ್ನು ಸತ್ಕರಿಸಲಾಯಿತು. ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಡಾ ವೀರೇಶ್ ಹಂಡಿಗಿ ಸ್ವಾಗತಿಸಿದರೆ, ಕಾರ್ಯದರ್ಶಿ ಡಾ .ಬಿ. ಎಸ್. ಮಾಳವಾಡ ಪರಿಚಯಿಸಿದರು. ಪ್ರತಿಷ್ಠಾನದಗೌರವಾಧ್ಯಕ್ಷ,ಹಿರಿಯಪತ್ರಕರ್ತ ಗಣಪತಿ ಗಂಗೊಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಟ್ರಸ್ಟಿನ ಉಪಾಧ್ಯಕ್ಷರಾದ ಲಿಂಗರಾಜ್ ಅಂಗಡಿ, ಸಂತೋಷ ಶೆಟ್ಟಿ ಹಾಗೂ ನಿರ್ದೇಶಕರಾದ ಬಸವರಾಜ ಕರ್ಕಿ ಸಂಭಾಜಿ ಕಲಾಲ್ ,ಆರ್. ಎಂ. ಗೋಗೇರಿ, ಪ್ರೊ.ಎಸ್.ವಿ. ಪಟ್ಟಣಶೆಟ್ಟಿ ಇತರರು ಇದ್ದರು. ಕವಿ ಸೋಮು ರೆಡ್ಡಿ ನಿರೂಪಿಸಿದರು. ಸಹ ಕಾರ್ಯದರ್ಶಿ ರವೀಂದ್ರ ರಾಮದುರ್ಗ ಕರ್ ವಂದಿಸಿದರು.

# ಲಾಠಿ ಚಾರ್ಜ್ ಖಂಡಿಸಿ ರಾಜ್ಯ ಹೆದ್ದಾರಿ ಬಂದ್



**ಸಿಂದಗಿ :** ಇಂದು ಬೆಳಗಾವಿಯಲ್ಲಿ ಪಂಚಮಸಾಲಿ ಸಮಾಜದ ಹೋರಾಟದಲ್ಲಿ ಪೋಲೀಸ್ ಲಾಠಿ ಚಾರ್ಜ್ ಖಂಡಿಸಿ ಗೋಲಗೇರಿ ಗ್ರಾಮದಲ್ಲಿ ಪಂಚಮಸಾಲಿ ಸಮಾಜದ ವತಿಯಿಂದ ರಾಜ್ಯ ಹೆದ್ದಾರಿ ಸಂಪೂರ್ಣ ಬಂದ್ ಮಾಡಿ ರಾಜ್ಯ ಸರ್ಕಾರ ವಿರುದ್ಧ ಉಗ್ರವಾಗಿ ಖಂಡಿಸಲಾಯಿತು.

ಈ ಸಂದರ್ಭದಲ್ಲಿ ಹೆದ್ದಾರಿ ಬಂದ್ ಮಾಡಿ ಮಾತನಾಡಿದ ಸಂತೋಷ ಪಾಟೀಲ ಅವರು ಬಡ ಪಂಚಮಸಾಲಿ ಮಕ್ಕಳಿಗೆ ಮೀಸಲಾತಿ ಕೊಡುವ ಸಲುವಾಗಿ ಸುಮಾರು ಐದು ವರ್ಷದಿಂದ ಹೋರಾಟ ಮಾಡ್ತಾ ಇದ್ದೇವು ನಿನ್ನೇ ನಡೆದ ಘಟನೆ ರಾಜ್ಯ ಸರ್ಕಾರ ಲಾಠಿ ಜಾರ್ಜ್ ಮಾಡಿಸಿ ಅನ್ಯಾಯ ಮಾಡಿದ್ದಾರೆ.

ಮುಂದೆ ದೊಡ್ಡ ಹೋರಾಟ ಮಾಡುತ್ತೇವೆ ಎಷ್ಟು ಜನರಿಗೆ ಲಾಠಿ ಜಾರ್ಜ್ ಮಾಡಿಸುತ್ತಾರೆ ನೋಡೋಣ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಸಿದ್ದನಗೌಡ ಪಾಟೀಲ ಗೌಡಣ್ಣ ಆಲಮೇಲ ಪ್ರಭುಗೌಡ ಬಿರಾದಾರ ಮಾತನಾಡಿದರು ಶ್ರೀಶೈಲ್ ಚಳ್ಳಗಿ ಸುನೀಲಗೌಡ ಪಾಟೀಲ ಕುಮಾರಗೌಡ ಪಾಟೀಲ ಪ್ರಕಾಶ್ ಹೊಸಮನಿ ಗೋಲ್ಲಾಳಗೌಡ ಬಿರಾದಾರ ಮುದಕನಗೌಡ ಬಿರಾದಾರ ಮಲಕನಗೌಡ ಪಾಟೀಲ್ ಸಂತೋಷ ರದ್ದೇವಾಡಗಿ ಸುಭಾಸಗೌಡ ಬಿರಾದರ ಓಂಪ್ರಕಾಶ ಬಿರಾದಾರ ಮಾಂತಗೌಡ ಬಿರಾದಾರ ಬಸನಗೌಡ ಮೆಲನಿಮನಿ ಗೋಲ್ಲಾಳ ಮೇಲಿನಮನಿ ಹಾಜರಿದ್ದರು.

# ಬದುಕಿನ ಸಾರ್ಥಕತೆಗೆ ಪ್ರಯತ್ನಿಸಬೇಕು: ಮಲ್ಲಪ್ಪ ಚೆನ್ನಿ



**ಬಾಗಲಕೋಟೆ :** ಸ್ವಂತ ಶ್ರಮದ ದುಡಿಮೆಯ ಫಲದಲ್ಲಿ ನಿಸ್ವಾರ್ಥ ಮನೋಭಾವದಿಂದ ದಾನವನ್ನು ನೀಡಬೇಕು, ದೇಶದ ರಕ್ಷಣೆಗಾಗಿ ಪ್ರಾಣ ತ್ಯಾಗ ಮಾಡಲು ಸಿದ್ದರಾಬೇಕು, ಜಗತ್ತಿನ ನಿಯಮದಲ್ಲಿ ಯಾವುದೇ ಪ್ರಯತ್ನವು ವ್ಯರ್ಥವಾಗುವುದಿಲ್ಲ. ಯಶಸ್ಸಿನ ಹಾದಿಯಲ್ಲಿ ನಡೆದು, ಧಾನ ಮಾಡುವ ಗುಣವನ್ನು ನಾವು ರೂಢಿಸಿಕೊಳ್ಳಬೇಕು ಎಂದು ಕೃಷಿ ಅಧಿಕಾರಿಗಳಾದ ಮಲ್ಲಪ್ಪ ವಾಯ್ ಚೆನ್ನಿ ಇವರು ಹೇಳಿದರು.

ದೇವರ ದಾಸಿಮಯ್ಯನವರ ವಚನ ಚಿಂತನಗೋಷ್ಠಿಯಲ್ಲಿ ವಚನವನ್ನು ವಿಶ್ಲೇಷಣೆ ಮಾಡುತ್ತಾ "ತೀವಿ ಕುಳ್ಳಿರ್ದ ಸಭೆಯಲ್ಲಿ ಈಯಬಲ್ಲುರೆ ದಾನವ, ಸಾವರೆ ಸಂಗ್ರಾಮಕ್ಕೆ ಹೋದವರೆಲ್ಲ, ಇರಿಯಬಲ್ಲರೆ ನೂರಕ್ಕೊಬ್ಬ ಸಹಸ್ರಕ್ಕೊಬ್ಬ, ಹುಣಸೆಯ ಹೂವೆಲ್ಲ ಕಾಯಾಗಬಲ್ಲುದೇ ಕಾಣಾ ರಾಮನಾಥ." ಎಂದು ಶರಣರ ವಚನಗಳಲ್ಲಿ ಇರುವ ದಾನ, ವೀರತ್ವ, ಜೀವನ ಸಫಲತೆಯ ಸಾರ್ಥಕತೆ ಸಂದೇಶವನ್ನು ತಿಳಿಸಿಕೊಟ್ಟರು. ತುಂಬಿ ಸಭೆಯಲ್ಲಿ ಸಾವಿರಾರು ಜನರು ಇದ್ದರೆನು ಅವರೆಲ್ಲರೂ ದಾನ ನೀಡುವ ಮನೋಭಾವ ಹೊಂದಿರಲಾರರು, ಯುದ್ದರಂಗದಲ್ಲಿ ಎದುರಾಳಿಯನ್ನು ಸೆದೆಬಡಿದು ಹೋರಾಡುವವರ ಸಂಖ್ಯೆ ವಿರಳ, ಭೂಮಿ ಮೇಲೆ ಹುಟ್ಟಿದ ಪ್ರತಿಯೊಂದು ಜೀವಿಯು ಬದುಕಿನ ಸಾರ್ಥಕತೆಗೆ ಪ್ರಯತ್ನಿಸಬೇಕು ಎಂದು ಮನೋಜ್ಞವಾಗಿ ಮುಖ್ಯ ಅತಿಥಿಯಾದ ಮಲ್ಲಪ್ಪ ವಾಯ್ ಚೆನ್ನಿ ಇವರು ಹೇಳಿದರು. ಬಸಣ್ಣನವರ ಸಾರಿದ ಸಪ್ತಶೀಲಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಇದರಿಂದ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಸಾಧ್ಯ ಎಂದು ಜಿ ಎಮ್ ಧೂಪದ ಉಪನ್ಯಾಸಕರು ಪ್ರಾಸ್ತಾವಿಕವಾಗಿ ಹೇಳಿದರು.

ಬಾಗಲಕೋಟೆ ದೇವಾಂಗ ಸಮಾಜದ ವತಿಯಿಂದ ವಿದ್ಯಾಗಿರಿಯ ಶಿವಶಂಕರ ಮುತ್ತಗಿ ಇವರ ನಿವಾಸದಲ್ಲಿ ಮನೆ-ಮನಗಳ ವಚನ ಚಿಂತನಗೋಷ್ಠಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಕ್ಕಳಿಗೆ ವಚನ ಮಹತ್ವ, ಶಿವಶರಣ ಬದುಕಿನ ಬಗ್ಗೆ ಮನೆಯಲ್ಲಿ ಹೇಳಿಕೊಡಬೇಕು ಹಾಗೂ ಸಮಾಜದಲ್ಲಿ ಪ್ರತಿಯೊಬ್ಬ ಪುರುಷರು ಹಾಗೂ ಮಹಿಳೆಯರು ಸಂಘಟಿತರಾಗಿ ವಚನಗಳ ಚಿಂತನ-ಮಂತನಗಳಂತಹ ಗೋಷ್ಠಿಗಳಲ್ಲಿ ಭಾಗವಹಿಸಬೇಕೆಂದು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ದೇವಾಂಗ ಸಮಾಜದ ಅಧ್ಯಕ್ಷರಾದ ಎಸ್ ವ್ಹಿ ಚವಡಾಪುರ ಇವರು ಹೇಳಿದರು. ಉಪಾಧ್ಯಕ್ಷರಾದ ಮೋಹನ ಗೌರೀಶ, ಮತ್ತು ರಂಗಪ್ಪ ಶೇಬನಕಟ್ಟಿ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರವೀಣ ಹೆರೂರ, ಎನ್ ಎ ಡೊಂಬರಪೇಟ, ರಾಜೇಂದ್ರ ಹೂಲಿ. ಜಂಪಣ್ಣ ಶೇಬನಕಟ್ಟಿ. ಎಸ್ ಎನ್ ಮುತ್ತಗಿ, ಮುಂತಾದವರು ಹಾಗೂ ಸಂಘದ ಪದಾಧಿಕಾರಿಗಳು, ಮಹಿಳೆಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕುಮಾರಿ, ಪ್ರೇರಣಾ ಹೆರೂರು, ಅಕ್ಷರ ದಡ್ಡಿ, ಪ್ರಜ್ಞಾ ನಿಲುಗಲ್ ಇವರು ಪ್ರಾರ್ಥನೆ ಮಾಡಿದರು. ಶಿವಶಂಕರ ಮುತ್ತಗಿ ಸ್ವಾಗತ-ವಂದನಾರ್ಪಣೆ ಮಾಡಿದರು. ಕಾರ್ಯದರ್ಶಿ ಸುರೇಶ ಎಲ್ ದಡ್ಡಿ ನಿರೂಪಣೆ ಮಾಡಿದರು.

# ಹೋರಾಟ ಹತ್ತಿಕ್ಕಲು ಸರ್ಕಾರದಿಂದ ಗುಂಡಾ ವರ್ತನೆ-ಶಾಸಕ ರಾಜುಗೌಡ



**ತಾಳಿಕೋಟೆ :** ಪಂಚಮಸಾಲಿ ಸಮಾಜದ ಶ್ರೀ ಜಯಮೃತ್ಯುಂಜಯ ಮಹಾಸ್ವಾಮಿಗಳ ನೇತೃತ್ವದಲ್ಲಿ ಬೆಳಗಾವಿಯಲ್ಲಿ ಕೈಗೊಳ್ಳಲಾದ ಹೋರಾಟವನ್ನು ಹತ್ತಿಕ್ಕಲು ಹೋರಾಟಗಾರರ ಮೇಲೆ ಪೋಲಿಸ್‌ರಿಂದ ಲಾಟಿ ಚಾರ್ಜ ಮಾಡಿಸಿ ಕಾಂಗ್ರೇಸ್ ಸರ್ಕಾರವು ಗುಂಡವರ್ತನೆಯನ್ನು ಪ್ರದರ್ಶಿಸಿದೆ ಎಂದು ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕ ರಾಜುಗೌಡ ಪಾಟೀಲ(ಕು.ಸಾಲವಾಡಗಿ) ಅವರು ಕಿಡಿ ಕಾರಿದ್ದಾರೆ.

ಪತ್ರಿಕೆಯೊಂದಿಗೆ ದೂರವಾಣಿಯ ಮೂಲಕ ಮಾತನಾಡಿದ ಅವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಮ್ಮ ಹಕ್ಕಿಗಾಗಿ ಹೋರಾಟಗಳು, ಪ್ರತಿಭಟನೆಗಳನ್ನು ಮಾಡಲು ಅವಕಾಶವಿದೆ ಆದರೆ ಪಂಚಮಸಾಲಿ ಸಮಾಜದ ಬಂದುಗಳು 2ಎ ಮಿಸಲಾತಿಗಾಗಿ ಕೈಗೊಂಡ ಹೋರಾಟವನ್ನು ಮೊಟಕುಗೊಳಿಸಲು ಲಾಠಿ ಚಾರ್ಜ ಮಾಡಿಸಿ ತಮ್ಮ ಗುಂಡಾ ಪ್ರವೃತ್ತಿಯನ್ನು ಕಾಂಗ್ರೇಸ್ ಸರ್ಕಾರ ಮೇರೆದಿದೆ ಇದಕ್ಕೆ ತಕ್ಕವಾದ ಉತ್ತರ ಮುಂದೆ ಪಂಚಮಸಾಲಿ ಸಮಾಜದವರು ನೀಡಲಿದ್ದಾರೆ ಈ ಹೋರಾಟದಲ್ಲಿ ಪಂಚಮಸಾಲಿ ಸಮಾಜದ ಶ್ರೀ ಜಯಮೃತ್ಯುಂಜಯ ಮಹಾಸ್ವಾಮಿಗಳನ್ನು ಹಾಗೂ ಶಾಸಕರು ಮತ್ತು ಸಮಾಜದ ಅನೇಕ ಮುಖಂಡರುಗಳನ್ನು ಬಂದಿಸಿ ಪಂಚಮಸಾಲಿ ಸಮಾಜ ಬಂದುಗಳನ್ನು ಕೆಳಿಸುವಂತೆ ಮಾಡಿದೆ ಕೂಡಲೇ ಮುಖ್ಯಮಂತ್ರಿಗಳ ಆದಿಯಾಗಿ ಎಲ್ಲ ಸಚಿವರು ಸುವರ್ಣಸೌದದ ಅಧಿವೇಶನದಲ್ಲಿಯೇ ಕ್ಷಮಾಪಣೆಯನ್ನು ಕೇಳಬೇಕು ಈ ಹೋರಾಟದಲ್ಲಿ ಸಾಕಷ್ಟು ಜನರಿಗೆ ಗಾಯಗಳಾಗಿವೆ ಅಂತವರಿಗೆ ಚಿಕೀತ್ಸಾವೆಚ್ಚವನ್ನು ಸರ್ಕಾರದಿಂದಲೇ ಭರಿಸುವಂತಹ ಕಾರ್ಯ ಮಾಡಬೇಕೆಂದು ಒತ್ತಾಯಿಸಿದ ಅವರು ಕೂಡಲೇ ಪಂಚಮಸಾಲಿ ಸಮಾಜಕ್ಕೆ 2ಎ ಮಿಸಲಾತಿಯನ್ನು ಅಧಿವೇಶನದಲ್ಲಿ ಅಂಗೀಕರಿಸಿ ಅವರಿಗೆ ಎಲ್ಲರೀತಿಯ ಹಕ್ಕುಬಾದ್ಯತೆಗಳನ್ನು ಒದಗಿಸಿಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಡ ಕುಟುಂಬದ ಮಕ್ಕಳಿಗೆ ಶಿಕ್ಷಣ ಕಲಿಯಲು ಅವಕಾಶ ಕಲ್ಪಿಸಿದೆ ರಾಜು ನಾಯ್ಕ



**ಹಳ್ಳೂರ :** ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅಡಿಯಲ್ಲಿ ಗ್ರಾಮೀಣ ಪ್ರದೇಶದ ಬಡ ಕುಟುಂಬದ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಧರ್ಮಾಧಿಕಾರಿ ಡಾ ವೀರೇಂದ್ರ ಹೆಗಡೆಯವರು ಸಮಾಜದ ಉದ್ದಾರದ ಜೊತೆಗೆ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ಹಣದ ರೂಪದಲ್ಲಿ ಸಹಾಯ ಸಹಕಾರ ಮಾಡುತ್ತಿದ್ದಾರೆ ಎಂದು ತಾಲೂಕಾ ಯೋಜನಾಧಿಕಾರಿ ರಾಜು ನಾಯ್ಕ ಹೇಳಿದರು.

ಅವರು ಗ್ರಾಮದ ಸೌಭಾಗ್ಯವತಿ ಸುಮಿತ್ರಾ ದೇವಿ ಪಾಟೀಲ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ನಡೆದ ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಗ್ರಾಮಾಭಿವೃದ್ಧಿ ಯೋಜನೆಯ ಅಡಿಯಲ್ಲಿ ಶಾಲಾ ಕಟ್ಟಡ ಕಾಮಗಾರಿಗೆ 2 ಎರಡು ಲಕ್ಷ ರೂಪಾಯಿ ಸಹಾಯಧನಹಸ್ತಾಂತರಕಾರ್ಯಕ್ರಮದಲ್ಲಿ ಮಾತನಾಡಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಶಾಲಾ ಕಟ್ಟಡ, ಕಂಪೌಂಡ, ನಿರ್ಮಾಣ, ಶಿಕ್ಷಕರಿಗೆ ಸಹಾಯ ದನ, ಟ್ಯೂಷಣ ಕಲಿಕೆಗೆ, ಪ್ರೋತ್ಸಾಹ ಧನ, ಪರಿಸರ ಸಂರಕ್ಷಣೆ ಸ್ವಾಸ್ತ್ಯ ಕಾರ್ಯಕ್ರಮ,ವಿದ್ಯಾರ್ಥಿಗಳು ದುಷ್ಟ ಚಟಗಳಿಗೆ ಬಲಿಯಾಗಬಾರದೆಂದು ಜಾಗೃತಿ ಅಭಿಯಾನ, ಆಟದ ಮೈದಾನ ಶೌಚಾಲಯ ನಿರ್ಮಾಣ ,ಕೌಶಲ್ಯ ಅಭಿವೃದ್ಧಿ ತರಬೇತಿ ಹಾಗೂ ,ದೇವಸ್ಥಾನ ಜೀರ್ಣೋದ್ಧಾರಕ್ಕೆ ಅನೇಕ ಬಗೆಯ ಸೌಲಭ್ಯಗಳು ಸಿಗುತ್ತವೆ ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು. ಅಧ್ಯಕ್ಷರಾದ ಮಾರುತಿ ದಾಸರ ಮಾತನಾಡಿ ದೇವಸ್ಥಾನಗಳಿಗೆ ಹೋಗಿ ನಾವು ಹಣದ ರೂಪದಲ್ಲಿ ಕಾಣಿಕೆ ನೀಡುತ್ತೇವೆ ಆದರೆ ನಮ್ಮ ಶಾಲೆಯ ಕಟ್ಟಡ ಕಾಮಗಾರಿಗೆ ಪುಣ್ಯಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಹಣ ಕೊಟ್ಟಿದ್ದಕ್ಕೆ ನಮ್ಮ ಸೌಭಾಗ್ಯ ಎಂದು ಹೇಳಿದರು.

ಸಮಾಜ ಸೇವಕ ಮುರಿಗೆಪ್ಪ ಮಾಲಗಾರ ಮಾತನಾಡಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಬಡ ಕುಟುಂಬ ಶಾಲಾ ಕಾಲೇಜು ಕಟ್ಟಡ ಕಾಮಗಾರಿಗೆ ಹಣದರೂಪದಲ್ಲಿಸಹಾಯಮಾಡುತ್ತಿರುವ ಕಾರ್ಯ ನಿಜಕ್ಕೂ ಶ್ಲಾಘನೀಯ. ಆಡು ಮುಟ್ಟದ ಸೊಪ್ಪಿಲ್ಲ ಧರ್ಮಸ್ಥಳ ಸಂಸ್ಥೆ ಸಹಾಯ ಮಾಡುವ ಪುಣ್ಯದ ಕೆಲಸ ಉಳಿದಿಲ್ಲ ಎಂದು ಹೇಳಿದರು. ಭುದಾನಿಗಳಾದ ಭೀಮನಗೌಡ ಪಾಟೀಲ. ಪ್ರಧಾನ ಗುರುಗಳಾದ ಜಿ ಜಿ ಇಡನ್ನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಎಸ್ ಎಂ ಕೃಷ್ಣ ಅವರಿಗೆ ಸಂತಾಪ ಸೂಚಿಸಿ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು.

ಈ ಸಮಯದಲ್ಲಿ ಮೇಲ್ವಿಚಾರಕಿ ರೇಣುಕಾ ತಿಳುವಳಿ. ಒಕ್ಕೂಟ ಅಧ್ಯಕ್ಷೆ ಕೌಸರ ಹನಗಂಡಿ ಪ್ರೌಢಶಾಲೆಯಮುಖ್ಯೋಪಾದ್ಯಾಯರಾದ ಎಂ ಡಿ ಕಂಬಾರ. ಪಿ ಎಂ ಶಿವಾಪುರ. ಎ ಎಂ ಹೆಗ್ಗಾಣಿ. ಎಂ ಎಂ ನೇಸುರ. ಜಯಶ್ರೀ ಹೊಸಟ್ಟಿ. ಎಂ ಆರ್ ಬಂಡಿ. ಎಂ ಬಿ ಹುಕ್ಕೇರಿ. ಆರ್ ಎಲ್ ಹರಿಜನ. ಕೆ ಕೆ ಗುಳೇದ. ಎಂ ಡಿ ಮೇತ್ರಿ ಸೇರಿದಂತೆ ಶಿಕ್ಷಕರು ,ವಿದ್ಯಾರ್ಥಿಗಳಿದ್ದರು.

# ಕುಸ್ತಿ ಮತ್ತು ಪೈಲ್ವಾನರನ್ನು ಪ್ರೋತ್ಸಾಹಿಸಿ



**ರಬಕವಿ-ಬನಹಟ್ಟಿ :** ದೇಸಿ ಕ್ರೀಡೆ ಕುಸ್ತಿಯ ವೈಭವ ಮತ್ತೆ ಮರಳಿ ಬರಬೇಕಾದರೆ ಕುಸ್ತಿಯನ್ನು ಮತ್ತು ಪೈಲ್ವಾನರನ್ನು ಪ್ರೋತ್ಸಾಹಿಸುವುದರ ಜೊತೆಗೆ ಯುವ ಕುಸ್ತಿ ಪಟುಗಳಿಗೆ ಸೂಕ್ತ ಬೆಂಬಲ ನೀಡಬೇಕು ಎಂದು ನಿವೃತ್ತ ಪ್ರಾಚಾರ್ಯ ಎಸ್. ಬಿ. ಮಟೋಳಿ ತಿಳಿಸಿದರು.

ಅವರು ಗುರುವಾರ ಇಲ್ಲಿನ ಎಸ್. ಟಿ. ಸಿ. ಕಾಲೇಜಿನಲ್ಲಿ ಬಾಗಲಕೋಟೆ ವಿಶ್ವ ವಿದ್ಯಾಲಯ ಜಮಖಂಡಿ ಏಕ ವಲಯ ಪುರುಷ ಮತ್ತು ಮಹಿಳಾ ಕುಸ್ತಿ ಪಂದ್ಯಾವಳಿ ಮತ್ತು ವಿಶ್ವ ವಿದ್ಯಾಲಯ ತಂಡದ ಆಯ್ಕೆ ಪ್ರಕ್ರಿಯೆಯನ್ನು ಉದ್ಘಾಟಿಸಿ ಮಾತನಾಡಿದರು.

ಕುಸ್ತಿಯಿಂದ ನಮಗೆ ಯಾವುದೇ ಪ್ರತಿಫಲ ದೊರೆಯದೆ ಇರಬಹುದು. ಕುಸ್ತಿಯಲ್ಲಿ ಸೋಲು ಗೆಲವು ಮುಖ್ಯವಲ್ಲ. ಆದರೆ ಅದು ನಮ್ಮನ್ನು ದೈಹಿಕವಾಗಿ ಸಮರ್ಥರನ್ನಾಗಿ ಮಾಡುತ್ತದೆ ಎಂದು ಮಟೋಳಿ ತಿಳಿಸಿದರು.

ಪ್ರಾಚಾರ್ಯ ಡಾ. ಜಿ. ಆರ್. ಜುನ್ನಾಯ್ಕರ್ ಮಾತನಾಡಿ, ಉತ್ತಮ ದೇಹ, ಉತ್ತಮ ಆರೋಗ್ಯದಿಂದ ನಾವು ಮಾನಸಿಕವಾಗಿ ಸದೃಢರಾಗುತ್ತೇವೆ. ಕ್ರೀಡೆಯಿಂದ ನಾವು ನಮ್ಮ ವ್ಯಕ್ತಿತ್ವವನ್ನು ವಿಕಾಸ ಮಾಡಿಕೊಳ್ಳಲು ಸಾಧ್ಯ ಎಂದರು.

ಬಾಗಲಕೋಟೆ ವಿಶ್ವ ವಿದ್ಯಾಲಯದ ದೈಹಿಕ ನಿರ್ದೇಶಕ ಕೆ. ಎಂ. ಶಿರಹಟ್ಟಿ, ಜೆಎಸ್ಎಸ್ ಸಂಘದ ಆಡಳಿತ ಮಂಡಳಿಯ ಸದಸ್ಯ ವೀರಭದ್ರ ಕುಳ್ಳಿ ಮಾತನಾಡಿದರು.

ಕಾರ್ಯಾಧ್ಯಕ್ಷ ಬಸವಂತ ಜಾಡಗೌಡ, ಆಡಳಿತ ಮಂಡಳಿಯ ಸದಸ್ಯ ಶಂಕರ ಜಾಲಿಗಿಡದ, ಪ್ರಕಾಶ ಕರಲಟ್ಟಿ, ವಿವಿ ಆಯ್ಕೆ ಸಮಿತಿಯ ಸದಸ್ಯರಾದ ಕೆ. ಎಂ. ಅಥಣಿಮಠ, ಕಾಡೇಶ ನ್ಯಾಮಗೌಡ, ದೀಪಾ ಜಹಾಗೀರದಾರ, ದೈಹಿಕ ನಿರ್ದೇಶಕ ಜಿ. ಎಸ್. ಪಾಟೀಲ, ಪ್ರಕಾಶ ಕೆಂಗನಾಳ, ಕುಸ್ತಿ ಪಟು ರಮೇಶ ಜಿಡ್ಡಿಮನಿ, ವೇದಿಕೆಯ ಮೇಲಿದ್ದರು.

ಬಾಗಲಕೋಟೆ ವಿಶ್ವ ವಿದ್ಯಾಲಯದ ವ್ಯಾಪ್ತಿಯ ಪುರುಷ ಮತ್ತು ಮಹಿಳಾ ಕುಸ್ತಿ ಪಟುಗಳು ತಮ್ಮ ಕಲೆಯನ್ನು ಪ್ರದರ್ಶನ ಮಾಡಿ ಎಲ್ಲರ ಗಮನ ಸೆಳೆದರು.

# ಅಪಘಾತ ಪರಿಹಾರ ನೀಡದ್ದಕ್ಕೆ ಬಸ್ ಜಪ್ತಿ




**ರಬಕವಿ-ಬನಹಟ್ಟಿ :** ನ್ಯಾಯಾಲಯ ಆದೇಶ ನೀಡಿದರೂ ರಸ್ತೆ ಅಪಘಾತದ ಪರಿಹಾರ ನೀಡದೆ ಇರುವುದರಿಂದ ವಾಕರಾರಸಾ ನಿಗಮದ ಬಸ್ಸನ್ನು ಗುರುವಾರ ಬನಹಟ್ಟಿ ಬಸ್ ನಿಲ್ದಾಣದಿಂದ ನ್ಯಾಯಾಲಯ ಸಿಬ್ಬಂದಿ ಜಪ್ತಿ ಮಾಡಿದ್ದಾರೆ.

ತಾಲೂಕಿನ ಯಲ್ಲಟ್ಟಿಯ ಕೊಣ್ಣೂರ ಕಾಲೇಜು ಸಮೀಪ 2017 ರಲ್ಲಿ ಬಾಗಲಕೋಟ ಘಟಕಕ್ಕೆ ಸೇರಿದ ಬಸ್ಸಿನ ಬಾಗಿಲಿನಿಂದ ರಸ್ತೆ ಮೇಲೆ ಬಿದ್ದ ಪರಿಣಾಮ ಶಂಕರ ಪಟ್ಟಣಶೆಟ್ಟಿ ಎಂಬುವರು ಮೃತಪಟ್ಟಿದ್ದರು. ಪರಿಹಾರಕ್ಕಾಗಿ ಆತನ ಸಂಬಂಧಿಕರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಬನಹಟ್ಟಿ ಹಿರಿಯ ದಿವಾಣಿ ನ್ಯಾಯಾಧೀಶರು 9 ಲಕ್ಷ ಪರಿಹಾರ ಕೊಡುವಂತೆ ಆದೇಶಿಸಿದ್ದರು. 60 ದಿನಗಳೊಳಗೆ ಪರಿಹಾರ ತುಂಬಬೇಕಿತ್ತು. ಆದರೆ ಐದು ವರ್ಷಗಳಿಂದ ಪರಿಹಾರದ ಹಣ ತುಂಬದೇ ನಿರ್ಲಕ್ಷ್ಯ ವಹಿಸಿದ್ದರಿಂದ ಬನಹಟ್ಟಿ ಹಿರಿಯ ದಿವಾಣಿ ನ್ಯಾಯಾಲಯ ಬಸ್ ಜಪ್ತಿ ವಾರಂಟ್ ಹೊರಡಿಸಿತ್ತು. ನ್ಯಾಯಾಲಯ ಸಿಬ್ಬಂದಿ ಎಸ್. ಬಿ. ಮಧರಖಂಡಿ, ಸಿ. ಬಿ. ಪಾಟೀಲ ಬನಹಟ್ಟಿ ಬಸ್ ನಿಲ್ದಾಣಕ್ಕೆ ಆಗಮಿಸಿದ ಬಾಗಲಕೋಟೆ ಘಟಕದ ( ಕೆಎ-29 ಎಫ್-1301 ) ಬಸ್ಸನ್ನು ಜಪ್ತಿ ಪಡಿಸಿಕೊಂಡು ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ.

ಫಿರ್ಯಾದಿದಾರರ ಪರ ನ್ಯಾಯವಾದಿಗಳಾದ ಎಸ್. ಎ. ಪಾಟೀಲ ಹಾಗು ಎಂ. ಸಿ. ಚೋಳಿ ವಕಾಲತ್ತು ವಹಿಸಿದ್ದರು.

# ಇಂದ್ರಿಯಗಳನ್ನು ನಿಗ್ರಹಿಸುವವರೇ ನಿಜವಾದ ವೀರರು



**ರಬಕವಿ-ಬನಹಟ್ಟಿ :** ನಾವು ನಮ್ಮ ಜೀವನದಲ್ಲಿ ನಮ್ಮ ಅಂತರಂಗವನ್ನು ಪ್ರವೇಶ ಮಾಡುವುದರ ಮೂಲಕ ಶಾಂತಿಯನ್ನು ಪಡೆದುಕೊಳ್ಳಬಹುದಾಗಿದೆ. ನಾನು, ಆಸೆ ಮತ್ತು ಅಹಂಕಾರವನ್ನು ಬಿಟ್ಟರೆ ಜೀವನದಲ್ಲಿ ಶಾಂತಿಯನ್ನು ಪಡೆದುಕೊಳ್ಳಲು ಸಾಧ್ಯ. ಜೀವನದಲ್ಲಿ ಇಂದ್ರಿಯಗಳನ್ನುನಿಗ್ರಹಿಸುವವರೇನಿಜವಾದವೀರರು ಎಂದು ಶ್ರೀಶೈಲದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ಹೇಳಿದರು.

ಅವರು ಬುಧವಾರ ಸಂಜೆ ಬನಹಟ್ಟಿಯ ಶ್ರೀ ಹಿರೇಮಠದಲ್ಲಿ ಶಾಂತವೀರ ಶಿವಾಚಾರ್ಯರ 34 ನೇ ಚಿರಲಿಂಗಾಂಗ ಸಾಮರಸ್ಯ ದಿನೋತ್ಸವದ ಅಂಗವಾಗಿ ಹಮ್ಮಿಕೊಂಡ ಆಧ್ಯಾತ್ಮಿಕ ಪ್ರವಚನ ಮತ್ತು ಬೆಳಕು ಆಧ್ಯಾತ್ಮ ಚಿಂತನೆ ಕಾರ್ಯಮವನ್ನು ಉದ್ಘಾಟಿಸಿ ಮಾತನಾಡಿದರು. ನಮಗೆ ಭೌತಿಕ ವಸ್ತುಗಳಿಂದ ಯಾವುದೆ ಶಾಂತಿ ದೊರೆಯುವುದಿಲ್ಲ. ನಾವು ಅಂತರಂಗದಲ್ಲಿ ಶಾಂತಿಯನ್ನು ಹುಡುಕಿಕೊಳ್ಳಬೇಕು. ದಶ ದಿಕ್ಕುಗಳಿಗಿಂತ ಅಂತರಂಗದ ದಿಕ್ಕು ಹೆಚ್ಚು ಶ್ರೇಷ್ಠವಾದುದು. ಮಠದ ಸ್ವಾಮೀಜಿಯವರ ದೂರದೃಷ್ಟಿ ಮತ್ತು ಕ್ರಿಯಾಶೀಲತೆಯಿಂದ ಮಠಗಳು ಅಭಿವೃದ್ಧಿಯಾಗುತ್ತವೆ. ನಾವು ಗಳಿಸುವ ಸಂಪತ್ತಿನಲ್ಲಿ ಒಂದಿಷ್ಟು ಸಂಪತ್ತನ್ನು ಸಮಾಜಕ್ಕೆ, ಧರ್ಮಕ್ಕೆ ಮತ್ತು ದೇಶಕ್ಕಾಗಿ ನೀಡಬೇಕು ಎಂದು ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ತಿಳಿಸಿದರು.

ಹಿರೇಮಠದ ಶರಣಬಸವ ಶಿವಾಚಾರ್ಯರು ಮಾತನಾಡಿ,ಇಂದಿನ ದಿನಗಳಲ್ಲಿ ಮನಸ್ಸಿನ ಶಾಂತಿಗಾಗಿ ನಾವು ಆಧ್ಯಾತ್ಮಿಕ ಪ್ರವಚನ ಮತ್ತು ಚಿಂತನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂದು ತಿಳಿಸಿದರು. ಚಟ್ಟರಕಿಯ ವೇದಮೂರ್ತಿ ಶಂಕ್ರಯ್ಯ ಶಾಸ್ತ್ರಿಗಳು ಪ್ರವಚನ ನುಡಿಗಳನ್ನಾಡಿದರು.

ಜಮಖಂಡಿಯ ಕಲ್ಯಾಣಮಠದ ಗೌರಿಶಂಕರ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಕೊಣ್ಣೂರಿನ ಹೊರಗಿನಮಠದ ವಿಶ್ವಪ್ರಭು ಶಿವಾಚಾರ್ಯ ಸ್ವಾಮೀಜಿ, ಪಂಚಾಕ್ಷರಿ ಶಾಸ್ತ್ರಿಗಳು, ನಗರದ ಗಣ್ಯರಾದ ಶ್ರೀಪಾದ ಬಾಣಕಾರ, ರಾಜಶೇಖರ ಮಾಲಾಪುರ, ಶ್ರೀಶೈಲಧಬಾಡಿ, ಮಲ್ಲಿಕಾರ್ಜುನ ತುಂಗಳ ವೇದಿಕೆಯ ಮೇಲೆ ಇದ್ದರು.

ಎಂ. ಜಿ. ಕೆರೂರ, ಭೀಮಶಿ ಮಗದುಮ್, ಗಂಗಪ್ಪ ಮುಗತಿ, ಪಂಡಿತ ಪಟ್ಟಣ, ಬಸಪ್ಪ ಕೊಣ್ಣೂರ, ಶಿವು ಗುಂಡಿ, ಸುರೇಶ ಕೋಲಾರ, ಎಸ್. ಎಂ. ದಾಶಾಳ, ಮಹಾದೇವ ಕವಿಶೆಟ್ಟಿ, ಬಸವರಾಜ ಜಾಡಗೌಡ, ದಾನಪ್ಪ ಹುಲಜತ್ತಿ, ಚಂದ್ರಶೇಖರ ಮಿರ್ಜಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಭಾವೈಕ್ಯತೆಯ ಸಂದೇಶ ಸಾರುವಲ್ಲಿ ವಿಶ್ವಕರ್ಮ ಯಶಸ್ವಿ ಜಕಣಾಚಾರಿಯಿಂದ ಯೋಗಿರಾಜವರೆಗೂ ವಿಶ್ವಕರ್ಮ ಗುರುತು



**ಬನಹಟ್ಟಿ :** ನಾಗರಿಕತೆಯ ಅರಿವಿಲ್ಲದ ಶಿಲಾಯುಗದ ಸಂದರ್ಭದಲ್ಲಿ ಪಂಚ ಶಿಲ್ಪಿಗಳಾದ ಮರ, ಕಬ್ಬಿಣ, ತಾಮ್ರ, ಕಲ್ಲು, ಬಂಗಾರಗಳಿಂದ ಶಿಲ್ಪಗಳ ಕೆತ್ತನೆಯ ಮೂಲಕ ಜಗತ್ತಿಗೆ ಶಿಲ್ಪಕಲೆ ಒದಗಿಸಿದ ಕೀರ್ತಿ ವಿಶ್ವಕರ್ಮದ್ದಾಗಿದೆ ಎಂದು ಹಾಸನ ಅರಕಲುಗೂಡು ಅರೇಮಾದನಹಳ್ಳಿ ಮಹಾಸಂಸ್ಥಾನಮಠದ ವಿಶ್ವಕರ್ಮ ಜಗದ್ಗುರು ಶಿವಸುಜ್ಞಾನ ತೀರ್ಥ ಶ್ರೀಗಳು ಹೇಳಿದರು.

ಬನಹಟ್ಟಿಯ ವಿಶ್ವಕರ್ಮ ದೇವಸ್ಥಾನದ ಗೋಪುರ ಹಾಗು ಕಳಸಾರೋಹಣ ಸಮಾರಂಭದ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ಭಾವೈಕ್ಯತೆಯ ಸಂದೇಶ ಸಾರುವಲ್ಲಿ ವಿಶ್ವಕರ್ಮ ಯಶಸ್ಸು ಕಂಡಿದೆ. ಪಾಶ್ಚಾತ್ಯರು ದೇಶಕ್ಕೆ ಆಗಮಿಸಿದ್ದು ಇಲ್ಲಿನ ಶಿಲ್ಪಕಲೆ, ಧಾರ್ಮಿಕ ಹಾಗು ಆಧ್ಯಾತ್ಮ ಚಿಂತನೆ ಅರಿಯಲು ಎಂದರು. ಅಂದಿನ ಅಮರಶಿಲ್ಪಿ ಜಕಣಾಚಾರಿಯಿಂದ ಈಗಿನವರೆಗೂ ಅಯೋಧ್ಯೆಯ ಬಾಲರಾಮನ ಶಿಲ್ಪ ಕೆತ್ತನೆಯ ಅರುಣ ಯೋಗಿರಾಜವರೆಗೂ ವಿಶ್ವಕರ್ಮದ ಕಲೆ ಜೀವಂತವಾಗಿರುವದೇ ಸಾಕ್ಷಿಯೆಂದರು.

ರಬಕವಿ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳು ಮಾತನಾಡಿ, ಎಲ್ಲದರ ಕೃರ್ತ, ಕುಶಲಕರ್ಮಿ ಹಾಗು ದೈವಿಕ ವಾಸ್ತುಶಿಲ್ಪಿ ವಿಶ್ವಕರ್ಮ ದೇವರಾಗಿದ್ದು, ಅರಮನೆ, ಮಹಲು, ವಾಹನ, ಆಯುಧ ಸೇರಿದಂತೆ ಇತರೆ ತಾಂತ್ರಿಕ ವಸ್ತುಗಳನ್ನು ನಿರ್ಮಿಸುವಲ್ಲಿ ಕಾರಣರಾಗಿದ್ದಾರೆಂದರು.

ವೇದಿಕೆ ಮೇಲೆ ಬಂಡಿಗಣಿ ಬಸವಗೋಪಾಲ ನೀಲಮಾಣಿಕ ಮಠದ ಅನ್ನದಾನೇಶ್ವರ ಶ್ರೀ, ಹಿರೇಮಠದ ಶರಣಬಸವ ಶಿವಾಚಾರ್ಯರು ಸಾನಿಧ್ಯ ವಹಿಸಿದ್ದರು. ಸಮಾಜದ ಅಧ್ಯಕ್ಷ ಮೌನೇಶ ಬಡಿಗೇರ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಪಿ. ಬಿ. ಬಡಿಗೇರ, ಶ್ರೀಶೈಲ ದಭಾಡಿ, ಮಲ್ಲಿಕಾರ್ಜುನ ತುಂಗಳ, ಶ್ರೀಪಾದ ಬಾಣಕಾರ, ನಗರಾಧ್ಯಕ್ಷೆ ವಿದ್ಯಾ ದಭಾಡಿ, ರಮೇಶ ಮಹಿಷವಾಡಗಿ, ಪ್ರಭಾಕರ ಸತ್ತಿ, ವಂದನಾ ಪತ್ತಾರ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಸುನೀಲ ಪತ್ತಾರ, ಅಭಿನಂದನ ಸೋನಾರ, ಶಿವಕುಮಾರ ಜುಂಜಪ್ಪನವರ, ಅಶೋಕ ಬಡಿಗೇರ, ರಾಘವೇಂದ್ರ ಬಡಿಗೇರರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮೋಹನ ಪತ್ತಾರ, ಅಶೋಕ ಪತ್ತಾರ, ಮಲ್ಲಿಕಾರ್ಜುನ ಪತ್ತಾರ, ಭೀಮರಾವ ಪತ್ತಾರ, ಸದಾಶಿವ ಬಡಿಗೇರ, ರಾಜು ಬಡಿಗೇರ, ಮಂಜು ಪತ್ತಾರ, ಅರವಿಂದ ಪತ್ತಾರ, ಚಂದ್ರು ಬಡಿಗೇರ, ಚಿದಾನಂದ ಪತ್ತಾರ, ಶ್ರೀಶೈಲ ಬಡಿಗೇರ, ಅನೀಲ ಬಡಿಗೇರ ಸೇರಿದಂತೆ ಅನೇಕರು ಭಾಗವಹಿಸಿದ್ದರು.



**ರಬಕವಿ-ಬನಹಟ್ಟಿ : ಬನಹಟ್ಟಿಯ ಕಾಡಸಿದ್ಧೇಶ್ವರ ಪಟ್ಟಣ ಸಹಕಾರಿ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಸುರೇಶ ಅಬಕಾರ ಹಾಗು ಉಪಾಧ್ಯಕ್ಷರಾಗಿ ಮಲ್ಲಣ್ಣ ಕಕಮರಿ ಆಯ್ಕೆಗೊಂಡರು.**

## ಕೊನೆಗೂ ಉರ್ದು ಪ್ರೌಢಶಾಲೆಗೆ ಕೂಡಿ ಬಂದ ಉದ್ಘಾಟನೆ ಭಾಗ್ಯ!



**ತೇರದಾಳ** : ಇಲ್ಲಿನ ಭದ್ರಗಿರಿ ರಸ್ತೆಯ ಗುಡ್ಡದ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಸರಕಾರಿ ಉರ್ದು ಪ್ರೌಢಶಾಲೆ ಕಟ್ಟಡದ ಉದ್ಘಾಟನೆ ಡಿಸೆಂಬರ್ 14 ರಂದು ನಡೆಯಲಿದೆ. ಅಂದು ಬೆಳಿಗ್ಗೆ ನಡೆಯುವ ಕಾರ್ಯಕ್ರಮಕ್ಕೆ ಅಲ್ಪಸಂಖ್ಯಾತರ ಸಚಿವ ಜಮೀರ ಅಹಮ್ಮದಖಾನ್, ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪುರ ಆಗಮಿಸುವರು. ಶಾಸಕ ಸಿದ್ದು ಸವದಿ ಅಧ್ಯಕ್ಷತೆ ವಹಿಸುವರು. ಸಂಸದ ಪಿ. ಸಿ. ಗದ್ದಿಗೌಡರ, ಶಾಸಕರಾದ ಜಗದೀಶ ಗುಡಗುಂಟಿಮಠ, ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ಡಾ. ಉಮಾಶ್ರೀ, ಜೆ. ಟಿ. ಪಾಟೀಲ, ಪ್ರಕಾಶ ಹುಕ್ಕೇರಿ, ಸುನೀಲಗೌಡ ಪಾಟೀಲ, ವಿಜಯಾನಂದ ಕಾಶಪ್ಪನವರ, ಎಚ್. ವೈ. ಮೇಟಿ, ಹನಮಂತ ನಿರಾಣಿ, ಭೀಮಸೇನ ಚಿಮ್ಮನಕಟ್ಟಿ, ಡಿಡಿಪಿಐ, ಬಿಇಒ ಸೇರಿದಂತೆ ಹಲವಾರು ಗಣ್ಯರು ಪಾಲ್ಗೊಳ್ಳುವರು.

1.11 ಕೋಟಿ ಅನುದಾನ-ಸರಕಾರಿ ಉರ್ದು ಪ್ರೌಢಶಾಲೆಗೆ ಉಮಾಶ್ರೀ ಶಾಸಕಿಯಾಗಿದ್ದಾಗ ಸರಕಾರದಿಂದ ನಾಲ್ಕು ಎಕರೆ ಜಾಗ ಮಂಜುರಾತಿ ಮಾಡಿಸಿದ್ದರು. ನಂತರ ಸಿದ್ದು ಸವದಿ ಕಟ್ಟಡಕ್ಕಾಗಿ 1.11 ಕೋಟಿ ಅನುದಾನ ಒದಗಿಸುವ ಕೆಲಸ ಮಾಡಿದರು.

ಬ್ಯಾಂಕ್ ಕಟ್ಟಡವೂ ಉದ್ಘಾಟನೆ-ತೇರದಾಳ ಅಲ್ಪಸಂಖ್ಯಾತರ ಬ್ಯಾಂಕಿನ ಎರಡನೇ ಹಂತದ ಕಟ್ಟಡ ಉದ್ಘಾಟನೆ ಡಿಸೆಂಬರ್ 14 ರಂದು ಮದ್ಯಾಹ್ನ 12 ಗಂಟೆಗೆ ನಡೆಯಲಿದೆ. ಸಚಿವ ಜಮೀರ ಅಹಮ್ಮದಖಾನ ನೂತನ ಕಟ್ಟಡ ಉದ್ಘಾಟಿಸುವರು.

## ಹೆದ್ದಾರಿ ಬಂದ್: ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ



**ಮಹಾಲಿಂಗಪುರ** : ಬೆಳಗಾವಿ ಸುವರ್ಣ ಸೌಧದ ಮುಂದೆ 2ಂ ಮೀಸಲಾತಿಗಾಗಿ ಹೋರಾಟ ನಿರತ ಪಂಚಮಸಾಲಿ ಸಮಾಜದ ಪ್ರತಿಭಟನಾಕಾರರ ಮೇಲೆ ಲಾಠಿಚಾರ್ಜ್ ಮಾಡಿಸಿರುವ ಲಿಂಗಾಯತ ವಿರೋಧಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಕ್ಷಣ ಪಂಚಮಸಾಲಿ ಸಮಾಜ ಮತ್ತು ಜಗದ್ಗುರುಗಳ ಕ್ಷಮೆ ಕೇಳಬೇಕೆಂದು ಬಾಗಲಕೋಟೆ ಜಿಲ್ಲಾ ಪಂಚಮಸಾಲಿ ಸಮಾಜದ ಅಧ್ಯಕ್ಷ ಧರೆಪ್ಪ ಸಾಂಗಲೀಕರ ಒತ್ತಾಯಿಸಿದರು.

ಬೆಳಗಾವಿ ಘಟನೆಯನ್ನು ಖಂಡಿಸಿ ಮಹಾಲಿಂಗಪುರ ವಲಯದ ಪಂಚಮಸಾಲಿ ಸಮಾಜದಿಂದ ಪಟ್ಟಣದ ಕಿತ್ತೂರು ಚೆನ್ನಮ್ಮ ವೃತ್ತದಲ್ಲಿ ಹಮ್ಮಿಕೊಂಡ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಪ್ರತಿಭಟನೆ ನಿಯಂತ್ರಣ ನೆಪದಲ್ಲಿ ಪೊಲೀಸರು ನಡೆಸಿದ ಲಾಠಿಚಾಜಿ9ನಲ್ಲಿ ಸಾವಿರಾರು ಜನರಿಗೆ ಗಾಯಗಳಾಗಿವೆ. ಹೋರಾಟಗಾರರ ಮೇಲಿನ ಹಲ್ಲೆಯನ್ನು ಜಿಲ್ಲಾ ಪಂಚಮಸಾಲಿ ಸಮಾಜದ ವತಿಯಿಂದ ತೀವ್ರವಾಗಿ ಖಂಡಿಸುತ್ತೇವೆ. ಪಂಚಮಸಾಲಿ ಹೋರಾಟಗಾರರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಎಡಿಜಿಪಿ ಆರ್. ಹಿತೇಂದ್ರ ಅವರನ್ನು ಕೂಡಲೇ ಸೇವೆಯಿಂದ ವಜಾಗೊಳಿಸಬೇಕು. ಪಂಚಮಸಾಲಿಗಳ ಹಾಗೂ ರೈತರ ಮೇಲೆ ಹಾಕಿರುವ ಎಫ್‌ಆಯ್‌ಆರ್ ಕೇಸ್ಗಳನ್ನು ಹಿಂಪಡೆಯಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಇಂತಹ ಕ್ರೂರ ಕೃತ್ಯಕ್ಕೆ ಕಡಿವಾಣ ಹಾಕಬೇಕು. ಹೋರಾಟ ಹತ್ತಿಕ್ಕುತ್ತಿರುವ ರಾಜ್ಯ ಸರ್ಕಾರ ಮತ್ತು ಸಿಎಂ ಸಿದ್ದರಾಮಯ್ಯನವರಿಗೆ ಪಂಚಮಸಾಲಿಗಳು ತಕ್ಕ ಉತ್ತರ ನೀಡಲಿದ್ದಾರೆ ಎಂದು ಎಚ್ಚರಿಸಿದರು.

ಚನ್ನಮ್ಮ ವೃತ್ತದಲ್ಲಿ ಅರ್ಧಗಂಟೆಗಳ ಕಾಲ ರಬಕವಿ-ಜಾಂಬೋಟಿ, ಮುಧೋಳ-ನಿಪ್ಪಾಣಿ ರಾಜ್ಯ ಹೆದ್ದಾರಿಗಳನ್ನು ಮಾನವ ಸರಪಳಿಯ ಮೂಲಕ ಬಂದ್ ಮಾಡಿ, ಟೈಯರ್ಗೆ ಬೆಂಕಿ ಹಚ್ಚಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಭಟನೆ ನಡೆಸಿದರು. ನಂತರ ರಬಕವಿ-ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾದಿ ಅವರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು. ಬನಹಟ್ಟಿ ಸಿಪಿಆಯ್ ಸಂಜೀವ ಬಳಗಾರ, ಸ್ಥಳಿಯ ಎಸ್ಸೈ ಕಿರಣ ಸತ್ತಿಗೇರಿ ಹೆಚ್ಚಿನ ಪೊಲೀಸ್ ಸಿಬ್ಬಂದಿಯೊಂದಿಗೆ ಸೂಕ್ತ ಬಂದೋಬಸ್ತಿ ಒದಗಿಸಿದ್ದರು.

ಪ್ರತಿಭಟನೆಯಲ್ಲಿ ಸಿದ್ದುಗೌಡ ಪಾಟೀಲ, ಪರಪ್ಪ ಹುದ್ದಾರ, ವಿನೋದ ಉಳ್ಳಾಗಡ್ಡಿ, ಬಸವಣ್ಣಿ ಬ್ಯಾಳಿ, ಪಂಡಿತ ಪೂಜಾರಿ, ಶ್ರೀಶೈಲಪ್ಪ ಉಳ್ಳಾಗಡ್ಡಿ, ಹಣಮಂತ ಶಿರೋಳ, ಶ್ರೀಶೈಲಪ್ಪ ವಜ್ಜರಮಟ್ಟಿ, ಚನ್ನಪ್ಪ ಪಟ್ಟಣಶೆಟ್ಟಿ, ಪ್ರಭು ಹುದ್ದಾರ, ಬಸಪ್ಪ ಕೊಪ್ಪದ, ಬಸು ದಲಾಲ, ಮಹಾಲಿಂಗಪ್ಪ ಕಂಠಿ, ವ್ಹಿ.ಎಸ್. ಮುಧೋಳ, ಮಹಾಲಿಂಗ ಕಂಠಿ, ಡಾ.ಅಶೋಕ ದಿನ್ನಿಮನಿ, ಬಸವರಾಜ ಯರಗಟ್ಟಿ, ಬಸವರಾಜ ನಾಗನೂರ, ಹಣಮಂತ ಯರಗಟ್ಟಿ, ಗಿರೀಶ ಖೋತ, ಯಲ್ಲಪ್ಪ ಬಾಗೋಜಿ, ಪಂಡಿತ ಖೋತ, ಮಹಾದೇವ ಬೆಣಚಿನಮರಡಿ, ಚನ್ನಬಸು ಹುರಕಡ್ಲಿ, ಎಂ.ಎ.ಪಾಟೀಲ, ರವಿ ಗಿರಿಸಾಗರ, ನಾಗಪ್ಪ ಖೋತ, ಸಂದೀಪ ಸೂರಗೊಂಡ, ಮಲ್ಲು ದಲಾಲ, ಪರಮಾನಂದ ಬಂದಕ್ಕವರ ಸೇರಿದಂತೆ ಹಲವರು ಭಾಗವಹಿಸಿದ್ದರು.

## ತಾಲೂಕು ಹೋರಾಟ ನಿಯೋಗಕ್ಕೆ ಸಿಎಂ ಭೇಟಿಗಾಗಿ ಮನವಿ



**ಮಹಾಲಿಂಗಪುರ** : ಕಳೆದ 975 ದಿನಗಳಿಂದ ಪಟ್ಟಣದಲ್ಲಿ ನಡೆಯುತ್ತಿರುವ ಮಹಾಲಿಂಗಪುರ ತಾಲೂಕು ಹೋರಾಟ ಸಮಿತಿಯ ನಿಯೋಗವು ಬೆಳಗಾವಿ ಅಧಿವೇಶನದಲ್ಲಿ ಸಿಎಂ ಸಿದ್ದರಾಮಯ್ಯನವರ ಭೇಟಿಗೆ ಅವಕಾಶ ಕಲ್ಪಿಸಬೇಕೆಂದು ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಅವರಿಗೆ ಗುರುವಾರ ಬೆಳಗಾವಿ ಸುವರ್ಣ ಸೌಧದಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಸಿಎಂ ಅವರ ಕಾರ್ಯಕ್ರಮಗಳ ಒತ್ತಡವನ್ನು ನೋಡಿಕೊಂಡು ಡಿಸೆಂಬರ್ 15 ಅಥವಾ 16 ರಂದು ಮಹಾಲಿಂಗಪುರ ತಾಲೂಕು ಹೋರಾಟ ಸಮಿತಿಯ ನಿಯೋಗವು ಸಿಎಂ ಅವರನ್ನು ಭೇಟಿ ಮಾಡಲು ದಿನಾಂಕ ನಿಗದಿಪಡಿಸಿ ತಿಳಿಸಲಾಗುವದು ಎಂದರು.

ತಾಲೂಕು ಹೋರಾಟ ಸಮಿತಿಯ ನಿಂಗಪ್ಪ ಬಾಳಿಕಾಯಿ, ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಕಾಂಗ್ರೆಸ್ ಮುಖಂಡರಾದ ಸಿದ್ದು ಕೊಣ್ಣೂರ, ಮಹಾಲಿಂಗಪ್ಪ ತಟ್ಟಿಮನಿ, ಮಹಾದೇವ ಮಾರಾಪೂರ, ಮುಸ್ತಾಕ ಚಿಕ್ಕೋಡಿ, ಸಯ್ಯದ ಯಾದವಾಡ, ನಜೀರ ಝಾರೆ, ನಿಯಾಜ್ ಪಟೇಲ, ಶೇಖರ ಉತ್ತೂರ, ಆನಂದ ಚಮಕೇರಿ ಸೇರಿದಂತೆ ಹಲವರು ಹಾಜರಿದ್ದರು.

## ಚನ್ನಬಸು ಹುರಕಡ್ಲಿಯವರಿಗೆ ಸಮಾಜ ಸೇವಾ ರತ್ನ ಪ್ರಶಸ್ತಿ ಪ್ರದಾನ



**ಮಹಾಲಿಂಗಪುರ** : ಯುವಕರು ಧಾರ್ಮಿಕ ಕಾರ್ಯದಲ್ಲಿ ತೊಡಗುತ್ತಿರುವುದು ಶ್ಲಾಘನೀಯ ಸಂಗತಿ ಎಂದು ಡಾ. ಎ. ಆರ್. ಬೆಳಗಲಿ ಹೇಳಿದರು.

ಸ್ಥಳೀಯ ಬಸವನಗರದ ಮಾರುತೇಶ್ವರ ಕಾತಿ9ಕೋರ್ತಸವದ ಪ್ರಯುಕ್ತ ಹಮ್ಮಿಕೊಂಡಿದ್ದ ಪ್ರಶಸ್ತಿಪ್ರದಾನಮತ್ತುಸಾಂಸ್ಕೃತಿಕಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜ ಸೇವಕ ಚನ್ನಬಸು ಹುರಕಡ್ಲಿಯವರಿಗೆ ಸಮಾಜ ಸೇವಾ ರತ್ನ ಪ್ರಶಸ್ತಿ ನೀಡುವ ಮೂಲಕ ಸಂಘಟಕರು ಶ್ರೇಷ್ಠ ಕಾರ್ಯ ಮಾಡಿದ್ದಾರೆ ಎಂದರು.

ಸಮಾಜ ಸೇವಾ ರತ್ನ ಪ್ರಶಸ್ತಿ ಪ್ರದಾನ : ಕಳೆದ 16 ವರ್ಷಗಳಿಂದ ಸಮಾಜ ಸೇವೆ ಮಾಡುತ್ತಾ ತಮ್ಮ ಸ್ವಂತ ಖರ್ಚಿನಲ್ಲಿ ಬಡವರಿಗೆ ಉಚಿತ ಕೃತಕ ಕೈಕಾಲು ಜೋಡಣೆ, ಬಗಲು ಬಡಿಗೆ ವಿತರಣೆ, ನೇತ್ರ ತಪಾಸಣೆ, ನೇತ್ರ ಚಿಕಿತ್ಸೆ, ಕನ್ನಡಕ ವಿತರಣೆ, ಕಿವಿ ತಪಾಸಣೆ ಮತ್ತು ಶ್ರವಣ ಯಂತ್ರ ವಿತರಣೆ ದಂತ ಚಿಕಿತ್ಸೆ, ಹಲ್ಲಿನ ಸೆಟ್ ವಿತರಣೆ, ಬಡ ಮಹಿಳೆಯರಿಗೆ ಉಚಿತ ಸ್ವಯಂ ಉದ್ಯೋಗ ತರಬೇತಿ, ರಕ್ತದಾನ ಶಿಬಿರ ಆಯೋಜನೆ, ಸಂಧಿವಾತ, ತಲೆ, ಸೊಂಟ, ಬೆನ್ನು, ಕೈಕಾಲು ನೋವುಗಳಿಗೆ ಮಸಾಜ್ ಶಿಬಿರ ಹೀಗೆ ಬಡ ರೋಗಿಗಳ ಸರ್ವ ಸಂಕಷ್ಟಕ್ಕೂ ಸ್ಪಂದಿಸಿ ಹಾಗೂ ಕೊರೋನಾದಂತಹ ಸಂದಿಗ್ಧತೆಯಲ್ಲಿ ಆಹಾರ ಕಿಟ್ ವಿತರಣೆ ಸೇರಿದಂತೆ ಸದಾ ಸಮಾಜಮುಖಿ ಕೆಲಸ ಮಾಡುತ್ತಿರುವ ಸ್ಥಳೀಯ ಬಸವನಗರ ನಿವಾಸಿ, ಪುರಸಭಾ ಮಾಜಿ ಉಪಾಧ್ಯಕ್ಷ ಚನ್ನಬಸು ಹುರಕಡ್ಲಿಯವರಿಗೆ ಸಮಾಜ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಪುರಸ್ಕೃತ ಚನ್ನಬಸು ಹುರಕಡ್ಲಿ ಮಾತನಾಡಿ ಸಂಘಟರಿಗೆ ಕೃತಜ್ಞತೆ ಸಲ್ಲಿಸಿದರು. ಮಾಜಿ ಸೈನಿಕ ಶ್ರೀಶೈಲ ಭಜಂತ್ರಿ, ಉದ್ಯಮಿ ಚನ್ನಯ್ಯಾ ಚಟ್ಟಿಮಠ ಮಾತನಾಡಿದರು.

ಪುರಸಭಾ ಅಧ್ಯಕ್ಷ ಯಲ್ಲನಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಡಾ. ಮಂಜುನಾಥ ಚನ್ನಾಳ, ಡಾ. ಎಂ. ಆಕಳ್ಯಾಗೋಳ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕಾ ಅಧ್ಯಕ್ಷ ಬಲವಂತಗೌಡ ಪಾಟೀಲ, ಮುಖಂಡರಾದ ಶೇಖರ ಉತ್ತೂರ, ಹುಚ್ಚೇಶ ವಡ್ಡರ, ನೇತಾಜಿ ಶಿಂಧೆ, ರಾಮಚಂದ್ರ ಮಾದರ, ಆಯುಷ್ ಮಮದಾಪುರ, ಗೋಪಾಲ ಮಡ್ಡಗೋಳ, ಸದಾಶಿವ ವಡ್ಡರ, ಕಾಂತು ಪರೀಟ, ಪರಶುರಾಮ ಮೇತ್ರಿ, ಡಾ. ಎಂ. ಪೂಜೇರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬಸವರಾಜ ಮಾವಿನಹಿಂಡಿ ಸ್ವಾಗತಿಸಿದರು. ಪತ್ರಕರ್ತ ನಾರನಗೌಡ ಉತ್ತಂಗಿ ಸೊಗಸಾಗಿ ನಿರೂಪಿಸಿದರು. ಸಂಗೀತ ರಸಮಂಜರಿ ಮತ್ತು ಹಾಸ್ಯ ಕಾರ್ಯಕ್ರಮ ಜರುಗಿತು.

## ಘಟಿಗೆಪ್ಪ ಬಸಪ್ಪ ಕುರಬೆಟ್ಟ ನಿಧನ



**ಮಹಾಲಿಂಗಪುರ** : ಸಮೀಪದ ಅಕ್ಕಿಮರಡಿ ಗ್ರಾಮದ ನಿವಾಸಿ, ಪಂಚಮಸಾಲಿ ಸಮಾಜದ ಘಟಿಗೆಪ್ಪ ಬಸಪ್ಪ ಕುರಬೆಟ್ಟ ತಮ್ಮ 91 ನೆಯ ವಯಸ್ಸಿನಲ್ಲಿ ಡಿಸೆಂಬರ್ 10 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ.

## ತುಳಿದು ಬಾಳುವದಕ್ಕಿಂತ ತಿಳಿದು ಬಾಳುವುದೇ ಲೇಸು: ಶ್ರೀಶೈಲ ಶ್ರೀಗಳು



**ಅಥಣಿ** : ಪ್ರಾಮಾಣಿಕತೆಯಿಂದ ಗಳಿಸಿದ ಹಣದಲ್ಲಿ ಸ್ವಲ್ಪ ಭಾಗ ಒಳ್ಳೆಯ ಕಾರ್ಯಕ್ಕೆ ಸಹಾಯ ಮಾಡುವ ಮನೋಭಾವ ರೂಡಿಸಿಕೊಳ್ಳಿರಿ ಎಷ್ಟೇ ಕಷ್ಟ ಬಂದರೂ ಧರ್ಮ ಬಿಡಬಾರದು ಎಂದು ಶ್ರೀಶೈಲ ಫೀಠದ ಜಗದ್ಗುರು ಡಾ॥ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಅವರು ಸ್ಥಳೀಯ ಆದರ್ಶ ಶಿಕ್ಷಕ ಮುರಗೇಪ್ಪಾ ಐಗಳಿ ದಂಪತಿಗಳ ತೋಟದ ಮನೆಯಲ್ಲಿ ಪಾದಪೂಜೆ ನೆರವೇರಿಸಿ ಧರ್ಮ ಸಭೆಯಲ್ಲಿ ಮಾತನಾಡುತ್ತಿದ್ದರು ಮನುಷ್ಯರಲ್ಲಿ ಹಾಗೂ ಪ್ರಾಣಿಗಳಲ್ಲಿ ತುಂಬಾ ವ್ಯತ್ಯಾಸವಿದೆ ಪ್ರಾಣಿಗಳು ನೀರು, ಗಾಳಿ, ಆಹಾರ ಸೇವನೆ ಮಾಡುತ್ತವೆ.

ಮನುಷ್ಯ ಆಗಬೇಕೆಂದರೆ ಮೊದಲು ಧರ್ಮ ಪಾಲನೇ ಮಾಡಬೇಕು ಪ್ರಾಮಾಣಿಕತೆ, ನೀತಿ, ಧರ್ಮ, ಧಾನ, ಪೂಜೆ ಇನ್ನೊಬ್ಬರಿಗೆ ಸಹಾಯ ಮಾಡುವುದು ಇದು ನಿಜವಾಗಿ ಮನುಷ್ಯರಲ್ಲಿ ಇರಲೇಬೇಕಾದ ಅಂಶಗಳು. ಇನ್ನೊಬ್ಬರನ್ನು ಸದ್ಗುಣದಿಂದ ನೋಡಬೇಕು ಬಿದ್ದವರನ್ನು ಎಬ್ಬಿಸುವ ಕಾರ್ಯ ಮಾಡಬೇಕು.

ತುಳಿದು ಬಾಳುವದಕ್ಕಿಂತ ತಿಳಿದು ಬಾಳುವುದೇ ಲೇಸು ಇವುಗಳನ್ನು ನಾವು ಮರೆತರೆ ಭೂಮಿಯ ಮೇಲೆ ಭಾರವಾದಂತೆ. ಮನುಷ್ಯ ರೂಪದ ಪ್ರಾಣಿ ಇದ್ದಂತೆ ಮಾನವನ ಕುಲ ದೊಡ್ಡದು ಕಾಯಕದಿಂದ ದುಡಿದು ಅನ್ನದಾತರಾಗಬೇಕು. ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದಲ್ಲಿ ದೇವರು ನಿಮ್ಮ ಕೈ ಎಂದೂ ಬಿಡುವದಿಲ್ಲ. ಐಗಳಿ ಗ್ರಾಮಕ್ಕೆ ನಾವು ಪ್ರಥಮವಾಗಿ ಆಗಮಿಸಲು ಶಿಕ್ಷಕ ಎಮ್.ಕೆ.ಐಗಳಿ ದಂಪತಿಗಳ ಸತತ ಪ್ರಯತ್ನದಿಂದ ಮತ್ತು ಶಿಕ್ಷಕ ಮಲ್ಲಪ್ಪ ಸಿಂಧೂರ ದಂಪತಿಗಳು ಇವರ ಆಸೆಯ ಮೇರೆಗೆ ಬರಲು ಸಾಧ್ಯವಾಯಿತು. ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಟ್ಟು ಜೊತೆಗೆ ಸಂಸ್ಕಾರ ಕೊಟ್ಟು ಭಾರತದ ಉತ್ತಮ ಪ್ರಜೆಯನ್ನಾಗಿ ಮಾಡಿರಿ ಎಂದರು

ಮುರಗೇಪ್ಪಾ ಐಗಳಿ (ಶಿಕ್ಷಕ) ದಂಪತಿಗಳು ಜಗದ್ಗುರುಗಳ ಪಾದಪೂಜೆ ನೆರವೇರಿಸಿದರು ಆರ್.ಆರ್.ಅಲಕುಂಟೆ, ಸಂಗೀತ ಹಾಗೂ ಶಾಲಾ ಮಕ್ಕಳಿಂದ ಸ್ವಾಗತ ಗೀತೆ ಜರುಗಿತು. ಮುತ್ತೂರು ಮಹಾಲಕ್ಷ್ಮೀ ದೇವಾಲಯದಿಂದ ಜಗದ್ಗುರುಗಳನ್ನು ಪಾದಯಾತ್ರಾ ಮೂಲಕ ವಿವಿಧ ವಾದ್ಯಗಳ ಮೆರವಣಿಗೆ ಮೂಲಕ ಭವ್ಯ ಸ್ವಾಗತ ಮಾಡಲಾಯಿತು ಈ ಮೆರವಣಿಗೆಯಲ್ಲಿ ಗ್ರಾಮದ ಗಣ್ಯರು ಯುವಕರು ಮಹಿಳೆಯರು ಜೈಕಾರದ ಮೂಲಕ ಶಿಕ್ಷಕನ ಮನೆಗೆ ಶ್ರೀಗಳನ್ನು ತಲುಪಿಸಿದರು

ಈ ವೇಳೆ ಕಾಜಿ ಬೀಳಗಿಯ ಚಿನ್ಮಯಾನಂದ ಸ್ವಾಮಿಜೀ, ಮಾತೋಶ್ರೀ ಉಮಾಮಹೇಶ್ವರ ತಾಯಿ ಇದ್ದರು. ಗ್ರಾಮದ ಹಿರಿಯರಾದ ಕೆ.ಎ.ಎಸ್ ಅಧಿಕಾರಿ ಮಲಗೌಡ ಝರೆ ದಂಪತಿಗಳು, ಹಿರಿಯ ಪತ್ರಕರ್ತ ಮಲಗೌಡ ಪಾಟೀಲ ದಂಪತಿಗಳು, ವಿಜಯಪೂರದ ದ್ರೋಣಾಸ್ ಅಕಾಡೆಮಿ ಮುಖ್ಯಸ್ಥ ಕಲ್ಮೇಶ ಆಸಂಗಿ, ಅಪ್ಪಾಸಾಬ ಪಾಟೀಲ, ಸೈದಪ್ಪ ಮಾದರ, ಆಕಾಶ ಮಾದರ, ಕರವೇ ಉಪಾಧ್ಯಕ್ಷರು, ಪ್ರಲ್ಹಾದ ಪಾಟೀಲ, ರುದ್ರಗೌಡ ಪಾಟೀಲ ದಂಪತಿಗಳು, ಅಡಹಳಟ್ಟಿ ದಾನಮ್ಮಾ ಮಹಿಳಾ ಮಂಡಳ ಸದಸ್ಯರನ್ನು ಜಗದ್ಗುರುಗಳು ಸತ್ಕರಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಶಿದ್ರಾಮ ಸಿಂಧೂರ, ನಿಂಗನಗೌಡ ಪಾಟೀಲ, ಎ.ಎಸ್.ನಾಯಿಕ, ಆರ್. ಆರ್.ತೆಲಸಂಗ, ಶಿವಾನಂದ ಸಿಂಧೂರ, ಶಿವನಿಂಗ ಅರಟಾಳ, ಮಲ್ಲಿಕಾರ್ಜುನ ಹಿಪ್ಪರಗಿ, ಸುರೇಶ ಮಾಕಾಣಿ, ಡಾ॥ ರವಿ ಮುದಗೌಡರ, ರವೀಂದ್ರ ಹಾಲಳ್ಳಿ, ಸೋಮನಿಂಗ ಝರೆ ಸೇರಿದಂತೆ ಅನೇಕರು ಇದ್ದರು. ಪ್ರಾರಂಭದಲ್ಲಿ ಶಿಕ್ಷಕ ಮುರಗೇಪ್ಪಾ ಐಗಳಿ ಸ್ವಾಗತಿಸಿದರು, ರಾಜಶ್ರೀ ನೇಮಗೌಡ ಹಾಗೂ ಪ್ರಕಾಶ ಬಿರಾದಾರ ನಿರೂಪಿಸಿದರು, ಮಲ್ಲಪ್ಪ ಸಿಂಧೂರ ವಂದಿಸಿದರು.

## ರಾಜ್ಯದಲ್ಲಿ ಇದುವರೆಗೆ 11 ಸಾವಿರ ಪ್ರಕರಣ ದಾಖಲು

## ರಾಜ್ಯದಲ್ಲಿ ಡಿಜಿಟಲ್ ಅರೆಸ್ಟ್ ವಂಚನೆ ಪ್ರಕರಣ ತಡೆಗೆ ಕ್ರಮ: ಗೃಹಸಚಿವ ಪರಮೇಶ್ವರ್



**ಬೆಳಗಾವಿ ಸುವರ್ಣಸೌಧ** : ರಾಜ್ಯದಲ್ಲಿ ಡಿಜಿಟಲ್ ಅರೆಸ್ಟ್ ವಂಚನೆ ಪ್ರಕರಣ ಬಗ್ಗೆ ಸಾಮಾಜಿಕ ಜಾಲತಾಣಗಲಾದ ಫೇಸ್ಬುಕ್ , ವಾಟ್ಸಾಪ್, ಹಾಗೂ ಸೈಬರ್ ಜಾಗೃತಿಯ ಸಂದೇಶಗಳ ಮೂಲಕ ಸಾರ್ವಜನಿಕರಲ್ಲಿ ಮೂಡಿಸಲಾಗುತ್ತಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.ಅವರು ಇಂದು ವಿಧಾನ ಪರಿಷತ್ತಿನಲ್ಲಿ ಸದಸ್ಯ ಕೆ.ಪ್ರತಾಪ್ ಸಿಂಹ ನಾಯಕ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದರು.

ರಾಜ್ಯದಲ್ಲಿ ಪ್ರಸ್ತುತ ವರ್ಷ ದಲ್ಲಿ ಡಿಜಿಟಲ್ ಅರೆಸ್ಟ್ ಸಂಬಂಧಿತ ಒಟ್ಟು 641 ಪ್ರಕರಣಗಳಲ್ಲಿ 109 ಕೋಟಿ ರೂ ಗೂ ಹೆಚ್ಚು ಮೊತ್ತದ ವಂಚನೆ ಆಗಿದ್ದು, ಅದರಲ್ಲಿ 9.45 ಕೋಟಿ ರೂಗಳನ್ನು ವಶಪಡಿಸಿಕೊಂಡು, 27 ಜನರನ್ನು ಅರೆಸ್ಟ್ ಮಾಡಲಾಗಿದೆ ಎಂದರು.

ಸಾರ್ವಜನಿಕರನ್ನು ಇಂತಹ ಅಪರಾಧಿಕ ಕೃತ್ಯಗಳ ಮೂಲಕ ವಂಚಿಸಲು ನಕಲಿ ಸಿಮ್ ಕಾರ್ಡ್ ಹಾಗೂ ನಕಲಿ ಬ್ಯಾಂಕ್ ಖಾತೆಗಳನ್ನು ಮಾರಾಟಕ್ಕೆ ಬಳಸುವ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟೆಲಿಗ್ರಾಂ, ಇತರೆ ಅಂತರ್ಜಾಲ ವೇದಿಕೆಗಳಲ್ಲಿ ಸಕ್ರಿಯವಾಗಿರುವ ಖಾತೆಗಳು ಹಾಗೂ ಗುಂಪುಗಳನ್ನು ಪತ್ತೆ ಹಚ್ಚಿ, 268 ಫೇಸ್‌ಬುಕ್ ಗುಂಪುಗಳು, 465 ಟೆಲಿಗ್ರಾಂ ಗುಂಪುಗಳು, 15 ಇನ್‌ಸ್ಟಾಗ್ರಾಂ ಖಾತೆಗಳು ಹಾಗೂ 61 ವಾಟ್ಸ್ ಆಪ್ ಗುಂಪುಗಳನ್ನು ನಿಷ್ಕ್ರಿಯಗೊಳಿಸಲಾಗಿದೆ ಎಂದರು.

ಶಾಲಾ ಕಾಲೇಜುಗಳಿಗೆ ಇತರೆ ಸಂಸ್ಥೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳು ಹಾಗು ಸಾರ್ವಜನಿಕರಿಗೆ "ಡಿಜಿಟಲ್ ಅರಸ ವಂಚನೆಯ ಬಗ್ಗೆ ಜಾಗೃತಿ ಮೂಡಿಸಲು ಜಾಗೃತಾ ಕೈಗೊಳ್ಳಲಾಗುತ್ತಿದೆ. ಡಿಜಿಟಲ್ ಅರೆಸ್ಟ್ ಮೂಲಕ ಸಾರ್ವಜನಿಕರನ್ನು ವಂಚಿಸುತ್ತಿರುವ ಸೈಬರ್ ವಂಚಕರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ, ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ದೇಶದಾದ್ಯಂತ ಡಿಜಿಟಲ್ ಅರೆಸ್ಟ್ ಪ್ರಕರಣ ಗಳು ದಿನೇ ದಿನೇ ಅಧಿಕಾವಾಗುತ್ತಿದ್ದು, ಇದುವರೆಗೆ ಇಡೀ ದೇಶದಲ್ಲಿ 42000 ಪ್ರಕರಣ ದಾಖಲಾಗಿದ್ದು ರಾಜ್ಯದಲ್ಲಿ 11000 ಪ್ರಕರಣ ದಾಖಲಾಗಿದೆ. ಸಾರ್ವಜನಿಕರು ಸೈಬರ್ ವಂಚನೆ ಆದ ಕೂಡಲೇ ಉಚಿತ ಸಹಾಯವಾಣಿ ಸಂಖ್ಯೆ 1930 ಗೆ ಮಾಹಿತಿ ನೀಡುವಂತೆ ತಿಳಿಸಿದರು.

## ಪಂಚಮಸಾಲಿ ಮೀಸಲಾತಿ ಹೋರಾಟದಲ್ಲಿ ಅನಗತ್ಯ ರಾಜಕೀಯ: ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಆರೋಪ

## ಮುಖ್ಯಮಂತ್ರಿಗಳ ಜೊತೆ ಮಾತನಾಡಲು ನಾನೇ ಆಹ್ವಾನಿಸಿದ್ದೆ



**ಬೆಳಗಾವಿ** : ಪಂಚಮಸಾಲಿ ಮೀಸಲಾತಿ ವಿಚಾರವಾಗಿ ಬಿಜೆಪಿ ನಾಯಕರು ವಿನಾಕಾರಣ ರಾಜಕೀಯ ಮಾಡುತ್ತಿದ್ದಾರೆ. ಮಾತುಕತೆಗೆ ಮುಖ್ಯಮಂತ್ರಿಗಳು ಮುಖಂಡರುಗಳನ್ನು ಕರೆತರುವಂತೆ ನನಗೇ ಸೂಚಿಸಿದ್ದರು. ಸಿಸಿ ಪಾಟೀಲ್ ಸೇರಿದಂತೆ ಹಲವು ನಾಯಕರಿಗೆ ನಾನೇ ಖುದ್ದು ಕರೆ ಮಾಡಿದರೂ ಯಾರು ಸಭೆಗೆ ಬರಲಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಆರೋಪಿಸಿದರು.

ಪಂಚಮಸಾಲಿ ಮೀಸಲಾತಿ ವಿಚಾರವಾಗಿ ಮಂಗಳವಾರದ ಪ್ರತಿಭಟನೆ ತೀವ್ರ ಸ್ವರೂಪ ಪಡೆದ ಕುರಿತು ಅಧಿವೇಶನದಲ್ಲಿ ಮತ್ತು ಮಾಧ್ಯಮಗಳೆದುರು ಪ್ರತಿಕ್ರಿಯಿಸಿದ ಸಚಿವರು, ಮೀಸಲಾತಿ ಹೋರಾಟ ರಾಜಕೀಯ ಆಗುತ್ತಿದೆ. ಇದರಲ್ಲಿ ಕಾಂಗ್ರೆಸ್, ಬಿಜೆಪಿ ಅಂತ ಬರಬಾರದು ಎಂದರು.


ಮೀಸಲಾತಿ ವಿಚಾರವಾಗಿ ಬಿಜೆಪಿಯವರಿಗೆ ಈ ಪ್ರೀತಿ ಮೊದಲೇ ಯಾಕಿರಲಿಲ್ಲ. ಅವರ ಸರ್ಕಾರ ಇದ್ದಾಗ 2ಂ ಮೀಸಲಾತಿಯನ್ನು ಯಾಕೆ ಕೊಡಲಿಲ್ಲ. ಆಗ ಮೀಸಲಾತಿ ಕೊಡದೇ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದರು ಎಂದು ಸಚಿವರು ಕಿಡಿಕಾರಿದರು.

ಕಾನೂನನ್ನು ಯಾರೂ ಕೈಗೆತ್ತಿಕೊಳ್ಳಬಾರದು. ಮಾತುಕತೆಗೆ ಮುಖ್ಯಮಂತ್ರಿಗಳು ಸಮಯ ಕೊಟ್ಟಿದ್ದರು. ನಾನೇ ಫೋನ್ ಮಾಡಿದ್ದಲ್ಲದೆ ಸ್ವತಃ ಹೋಗಿ ಕರೆದು ಬಂದಿದ್ದೆ. ಸಮಾಜದ 10 ಜನ ಮುಖಂಡರನ್ನು ಕರೆದುಕೊಂಡು ಬರಲು ಸಿಎಂ ಸೂಚಿಸಿದ್ದರು. ಈ ಸಂಬಂಧ ಸಿಸಿ ಪಾಟೀಲ್ ಅವರಿಗೆ ನಾನೇ ಫೋನ್ ಮಾಡಿ ಕರೆದೆ. ಅವರು ಯಾರೂ ಬರುತ್ತಿಲ್ಲ ಎಂದರು ಎಂದು ಸಚಿವರು ಹೇಳಿದರು.

**ಕಾನೂನು ಸುವ್ಯವಸ್ಥೆ ಕಾಪಾಡಬೇಕು**

ಪ್ರತಿಭಟನೆ ತೀವ್ರ ಸ್ವರೂಪ ಪಡೆಯಲು ಕೆಲವರ ಪ್ರಚೋದನೆಯೇ ಕಾರಣ. ಯಾರೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು. ನ್ಯಾಯಾಲಯದ ಆದೇಶದಂತೆ ಕಾನೂನು ಉಲ್ಲಂಘಿಸಿ ಪ್ರತಿಭಟನೆ ಮಾಡುವುದಿಲ್ಲ ಎಂದು ಸ್ವತಃ ಪ್ರತಿಭಟನಾಕಾರರೇ ಮುಚ್ಚಳಿಕೆ ಪತ್ರ ಬರೆದುಕೊಟ್ಟಿದ್ದರು. ಆದರೆ, ಪ್ರತಿಭಟನೆಯಲ್ಲಿ ಆಗಿದ್ದೇನು? ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಪ್ರಶ್ನಿಸಿದರು. ಜನರೆಲ್ಲಾ ಬೆಳಗ್ಗೆಯಿಂದ ಹಸಿದಿದ್ದಾರೆ. ಹಾಗಾಗಿ ಈ ಸಂದರ್ಭದಲ್ಲಿ ಪ್ರತಿಭಟನೆಗೆ ಇಳಿಯುವುದಕ್ಕಿಂತ ಮುಖ್ಯಮಂತ್ರಿಗಳ ಬಳಿ ಮಾತುಕತೆ ನಡೆಸೋಣ ಎಂದು ವಿನಂತಿಸಿದ್ದೆ. ಯಾರದೋ ಪ್ರಚೋದನೆಯಿಂದಾಗಿ ಅಮಾಯಕರು ಲಾಠಿ ಏಟು ತಿನ್ನುವಂತಾಯಿತು. ಇಂಥ ಘಟನೆಗಳು ಆಗಬಾರದು. ಹಿಂಸೆಗೆ ಯಾರೂ ಅವಕಾಶ ಕೊಡಬಾರದು ಎಂದು ಸಚಿವರು ಹೇಳಿದರು.

## ಎಸ್.ಎಂ.ಕೃಷ್ಣ ನಿಧಾನಕ್ಕೆ ಸಂತಾಪ



**ಮೂಡಲಗಿ** : ಮಾಜಿ ಮುಖ್ಯಮಂತ್ರಿ, ಮಾಜಿ ಕೇಂದ್ರ ಸಚಿವರು, ಮಾಜಿ ರಾಜ್ಯಪಾಲರೂ ಸೇರಿದಂತೆ ಅನೇಕ ಉನ್ನತ ಹುದ್ದೆಗಳಲ್ಲಿ ದಕ್ಷತೆಯಿಂದ ಕರ್ತವ್ಯ ನಿರ್ವಹಿಸಿ ರಾಜ್ಯಕ್ಕೆ ಹಾಗೂ ದೇಶಕ್ಕೆ ತಮ್ಮದೇಯಾದ ಅಪಾರ ಕೊಡುಗೆ ನೀಡಿದ್ದ ಹಿರಿಯರು, ಮುತ್ಸದ್ದಿಗಳಾದ ಎಸ್. ಎಂ. ಕೃಷ್ಣ ಅವರ ನಿಧನಕ್ಕೆ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಅವರು ತೀವ್ರ ಸಂತಾಪ ಸೂಚಿಸಿದ್ದಾರೆ.

ಅಜಾತ ಶತ್ರುಗಳಾಗಿದ್ದ ಅವರು, ಕಿರಿಯ ರಾಜಕಾರಣಿಗಳಿಗೆ ಸದಾ ಮಾರ್ಗದರ್ಶನ ಮಾಡುತ್ತಿದ್ದರು. ಅವರ ನಡೆ ನುಡಿ, ಜೀವನ ಶೈಲಿ, ರಾಜಕೀಯದ ಹೆಜ್ಜೆಗಳು ಸದಾ ಅನುಕರಣೀಯವಾಗಿದೆ ಎಂದು ಸ್ಮರಿಸಿದ್ದಾರೆ.

## ನ್ಯಾಯದಾನ ವ್ಯವಸ್ಥೆಯಲ್ಲಿನ ವಿಳಂಬ ತಡೆಗೆ ಸರ್ಕಾರ ಕ್ರಮ: ಸಚಿವ ಎಚ್. ಕೆ. ಪಾಟೀಲ

**ಬೆಳಗಾವಿ ಸುವರ್ಣಸೌಧ** : ರಾಜ್ಯದ ನ್ಯಾಯಾಲಯಗಳಲ್ಲಿರುವ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಇತ್ಯರ್ಥಪಡಿಸುವ ನಿಟ್ಟಿನಲ್ಲಿ ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು ಹಾಗೂ ನ್ಯಾಯದಾನ ವ್ಯವಸ್ಥೆಯಲ್ಲಿನ ವಿಳಂಬವನ್ನು ತಡೆಗಟ್ಟುವಲ್ಲಿ ಸರ್ಕಾರ ಅನೇಕ ಕ್ರಮ ಕೈಗೊಂಡಿದೆ ಎಂದು ಕಾನೂನು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಹೇಳಿದರು.

ಪರಿಷತ್‌ನಲ್ಲಿ ಸದಸ್ಯ ಭಾರತಿಶೆಟ್ಟಿ ಅವರ ಪರವಾಗಿ ಸದಸ್ಯ ರವಿಕುಮಾರ ಅವರು ಕೇಳಿದ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಅವರು ನ್ಯಾಯಾಲಯದ ಪ್ರಕರಣಗಳಲ್ಲಿ ಆಡಳಿತ ಇಲಾಖೆಗಳಿಂದ ಸಕಾಲದಲ್ಲಿ ಆಕ್ಷೇಪಣಾ ಹೇಳಿಕೆಗಳನ್ನು ದಾಖಲಿಸಲು ಅನುವಾಗುವಂತೆ ಮತ್ತು ನ್ಯಾಯಾಲಯ ಹೇಳಿಕೆಗಳನ್ನು ದಾಖಲಿಸಲು ಅನುವಾಗುವಂತೆ ಮತ್ತು ನ್ಯಾಯಾಲಯ ಪ್ರಕರಣಗಳನ್ನು ಸಮರ್ಥವಾಗಿ ನಿರ್ವಹಿಸಲು ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣಾ ಅಧಿನಿಯಮ, 2023 ಜಾರಿಗೆ ಬಂದಿರುತ್ತದೆ ಹಾಗೂ ನಿಯಮಗಳನ್ನು ರಚಿಸಿದ್ದು, ಅವುಗಳನ್ನು ಸದ್ಯದಲ್ಲೇ ಜಾರಿಗೆ ತರಲಾಗುತ್ತದೆ.

ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2023 ದಿನಾಂಕ: 04-03-2024 ರಿಂದ ಜಾರಿಗೆ ಬಂದಿರುತ್ತದೆ ಎಂದು ಅವರು ತಿಳಿಸಿದರು.

ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಸರ್ಕಾರದ ಪರ 2021ನೇ ಸಾಲಿನಲ್ಲಿ 3216, 2022ನೇ ಸಾಲಿನಲ್ಲಿ 2277, 2023ನೇ ಸಾಲಿನಲ್ಲಿ 2213 ಹಾಗೂ ಸರ್ಕಾರದ ವಿರುದ್ಧವಾಗಿ 2021ನೇ ಸಾಲಿನಲ್ಲಿ 20492, 2022ನೇ ಸಾಲಿನಲ್ಲಿ 16853, 2023ನೇ ಸಾಲಿನಲ್ಲಿ 14994 ಪ್ರಕರಣಗಳು ದಾಖಲಾಗಿವೆ ಎಂದು ಅವರು ಸದನಕ್ಕೆ ತಿಳಿಸಿದರು.

# ಆಂಜನೇಯ ಸ್ವಾಮಿ ಜನ್ಮಸ್ಥಳ ಅಂಜನಾದ್ರಿ ಬೆಟ್ಟದಲ್ಲಿ ವಿಶೇಷ ಸಂಭ್ರಮ

## ಹನುಮಮಾಲೆ ವಿಸರ್ಜನೆ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಸಹಸ್ರಾರು ಮಾಲಾಧಾರಿಗಳು

**ಕೊಪ್ಪಳ :** ಶ್ರೀ ಆಂಜನೇಯ ಸ್ವಾಮಿ ಜನ್ಮಸ್ಥಳವಾದ ಅಂಜನಾದ್ರಿ ಬೆಟ್ಟದಲ್ಲಿ ಗುರುವಾರ ಸಹಸ್ರಾರು ಸಂಖ್ಯೆಯ ಹನುಮ ಮಾಲಾಧಾರಿಗಳು ಆಗಮಿಸುತ್ತಿರುವುದರಿಂದ ಅಂಜನಾದ್ರಿಯಲ್ಲಿ ವಿಶೇಷ ಸಂಭ್ರಮ ಕಂಡುಬಂದಿತು.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗೊಂದಿ (ಚಿಕ್ಕರಾಂಪುರ) ಗ್ರಾಮದಲ್ಲಿರುವ ಅಂಜನಾದ್ರಿ ಬೆಟ್ಟದಲ್ಲಿ ಪ್ರತಿವರ್ಷದಂತೆ ಈ ವರ್ಷ ನಡೆಯುತ್ತಿರುವ ಹನುಮಮಾಲ ನಿಸರ್ಜನೆ ಕಾರ್ಯಕ್ರಮಕ್ಕೆ ಕರ್ನಾಟಕದ ಸೇರಿದಂತೆ ಬೇರೆ ಬೇರೆ ಕಡೆಯಿಂದಲೂ ಹನುಮ ಮಾಲಾಧಾರಿಗಳು, ದ್ವಿಚಕ್ರ ಮತ್ತು ನಾಲ್ಕು ಚಕ್ರ ವಾಹನಗಳು, ಬಸ್ ಹಾಗೂ ಕಾಲ್ನಡಿಗೆ ಮೂಲಕ ಅಂಜನಾದ್ರಿಗೆ ಆಗಮಿಸುತ್ತಿದ್ದಾರೆ.

ಮಾಲಾಧಾರಿಗಳಿಗಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ವತಿಯಿಂದ ಅಂಜನಾದ್ರಿಯಲ್ಲಿ ಭಕ್ತರಿಗೆ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡಲಾಗಿದ್ದು,

ಎಲ್ಲಾ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುತ್ತಿವೆ.

ಅಂಜನಾದ್ರಿಯ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಪಾದಗಟ್ಟೆಯ ಪ್ರದೇಶದಲ್ಲಿ ವಿಶೇಷ ರೀತಿಯಲ್ಲಿ ಶೃಂಗರಿಸಲಾಗಿದ್ದು, ಪೂಜೆ ಪುನಸ್ಕಾರಗಳು ನಡೆಯುತ್ತಿವೆ. ಬೆಟ್ಟದ ಮೇಲೆ ಹಾಗೂ ಬೆಟ್ಟ ಹತ್ತುವ ಮಾರ್ಗದಲ್ಲಿಯೂ ಸಹ ಹೂಗಳು ಮತ್ತು ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿದೆ.



ಅಂಜನಾದ್ರಿಯತ್ತ ಹನುಮಭಕ್ತರು ತಂಡೋಪ ತಂಡವಾಗಿ ಆಗಮಿಸುತ್ತಿರುವುದು ರಸ್ತೆಗಳಲ್ಲಿ ಕಂಡುಬರುತ್ತಿದೆ. ಭಕ್ತರು ಜೈ ಶ್ರೀರಾಮ್, ಜೈ ಹನುಮಾನ ಎಂಬ ಘೋಷಣೆಗಳನ್ನು ಕೂಗುತ್ತಾ ಗುಡಿಯತ್ತ ಸಾಗುತ್ತಿದ್ದಾರೆ.

ಭಕ್ತಾಧಿಗಳ ಆರೋಗ್ಯದ ಹಿತದೃಷ್ಟಿಯಿಂದ ವೈದ್ಯರ ತಂಡಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಅಗತ್ಯ ಔಷಧಿಗಳು, ಎರಡು ಅಂಬುಲೆನ್ಸ್ ತುರ್ತು ಸೇವೆಗಾಗಿ ಕಾಯ್ದಿರಿಸಲಾಗಿದೆ. ಪೊಲೀಸ್ ಭದ್ರತೆಗಾಗಿ ಹೊರ ಪೊಲೀಸ್ ಠಾಣೆ ಹಾಗೂ ಸಹಾಯವಾಣಿ ಕೇಂದ್ರಗಳನ್ನು ಸಹ ತೆರೆಯಲಾಗಿದೆ.

ಶಾಸಕರಿಂದ ಪರಿಶೀಲನೆ: ಹನುಮಾಲೆ ಧರಿಸಿ ಅಂಜನಾದ್ರಿಗೆ ಆಗಮಿಸಿದ ಗಂಗಾವತಿ ಶಾಸಕರಾದ ಜಿ.ಜನಾರ್ಧನರೆಡ್ಡಿ ಅವರು ಕಾರ್ಯಕ್ರಮದ ವ್ಯವಸ್ಥೆಯನ್ನು ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಈ ಬಾರಿಯ ಹನುಮಮಾಲ ವಿಸರ್ಜನೆಗಾಗಿ ಕಳೆದ ವರ್ಷಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಮಾಲಾಧಾರಿಗಳು ಆಗಮಿಸುತ್ತಿದ್ದಾರೆ. ಭಕ್ತಾಧಿಗಳಿಗಾಗಿ ಕುಡಿಯುವ ನೀರಿನ ವ್ಯವಸ್ಥೆ, ಸ್ನಾನದ ವ್ಯವಸ್ಥೆ, ಪ್ರಸಾದ, ದೇವಸ್ಥಾನದಲ್ಲಿ ದರ್ಶನಕ್ಕೆ ವ್ಯವಸ್ಥೆ, ಪೊಲೀಸ್ ಭದ್ರತೆ ಸೇರಿದಂತೆ ಎಲ್ಲಾ ವ್ಯವಸ್ಥೆಗಳನ್ನು ಜಿಲ್ಲಾಡಳಿತದಿಂದ ವ್ಯವಸ್ಥಿತವಾಗಿ ಮಾಡಲಾಗಿರುತ್ತದೆ. ಇದರ ಜೊತೆಗೆ ಗಂಗಾವತಿ ನಗರದಲ್ಲಿ ನಡೆಯುವ ಸಂಕೀರ್ತನಾ ಯಾತ್ರೆಗೂ ಸಹ ಅಗತ್ಯ ಸಹಕಾರ ನೀಡಲಾಗಿದೆ ಎಂದರು.

ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಎಂ.ಹೆಚ್. ಪ್ರಕಾಶರಾವ್ ಅವರು ಮಾತನಾಡಿ, ಹನುಮಮಾಲಾ ವಿಸರ್ಜನ ಕಾರ್ಯಕ್ರಮ ಗುರುವಾರ ಮತ್ತು ಶುಕ್ರವಾರ ನಡೆಯುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು ಆಗಮಿಸುತ್ತಿದ್ದಾರೆ. ಕೊಪ್ಪಳ ಜಿಲ್ಲಾಡಳಿತ, ಗಂಗಾವತಿ ತಾಲ್ಲೂಕು ಆಡಳಿತ ಮತ್ತು ಧಾರ್ಮಿಕ ದತ್ತಿ ಇಲಾಖೆಯಿಂದ ವಿವಿಧ ಮೂಲಭೂತಸೌಕರ್ಯಗಳನ್ನು ಒದಗಿಸಲು ಹಂತ ಹಂತವಾಗಿ ಸಭೆಗಳನ್ನು ಕೈಗೊಂಡು ಸಕಲ ವ್ಯವಸ್ಥೆಗಳನ್ನು ಮಾಡಲಾಗಿದೆ. ಬೆಟ್ಟದ ಮೇಲ್ಭಾಗದಲ್ಲಿ ದರ್ಶನದ ವ್ಯವಸ್ಥೆಯು ಅತ್ಯಂತ ಸೂಕ್ತ ರೀತಿಯಲ್ಲಾಗಬೇಕೆಂಬ ಜಿಲ್ಲಾಡಳಿತ ಉದ್ದೇಶದಂತೆ ಈ ವರ್ಷ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿದೆ. ಇದರ ಜೊತೆಗೆ ಭಕ್ತಾಧಿಗಳಿಗಾಗಿ ಊಟದ ವ್ಯವಸ್ಥೆ, ಸ್ನಾನದ ವ್ಯವಸ್ಥೆ, ಪಾರ್ಕಿಂಗ್ ಹಾಗೂ ಇತರ ವ್ಯವಸ್ಥೆಗಳನ್ನು ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಮಾಡಲಾಗಿದೆ. ಎಲ್ಲಾ ಕಡೆ ಸ್ವಚ್ಛತೆ, ನೈರ್ಮಲಿಕರಣಕ್ಕೂ ಕ್ರಮ ವಹಿಸಲಾಗಿದೆ. 70 ಸಾವಿರದಿಂದ 1 ಲಕ್ಷಕ್ಕೂ ಮೇಲ್ಪಟ್ಟು ಭಕ್ತಾಧಿಗಳು ಈ ಕಾರ್ಯಕ್ರಮಕ್ಕೆ ಬರುವ ನಿರೀಕ್ಷೆಯಿದೆ. ಪ್ರಸಾದವಾಗಿ ಭಕ್ತಾಧಿಗಳಿಗೆ ಲಡ್ಡು, ದಾರ, ಸಿಂಧೂರ ಮತ್ತು ತೀರ್ಥ ಬಾಟಲಿ ನೀರು ನೀಡುವ ವ್ಯವಸ್ಥೆಯನ್ನು ಸಹ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಲಗಿತ್ತಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್, ಗಂಗಾವತಿ ತಹಶೀಲ್ದಾರ ಯು.ನಾಗರಾಜ, ಕನಕಗಿರಿ ತಹಶೀಲ್ದಾರ ವಿಶ್ವನಾಥ ಮುರಡಿ, ಗಂಗಾವತಿ ನಗರಸಭೆ ಪೌರಾಯುಕ್ತ ಆರ್.ವಿರುಪಾಕ್ಷಪ್ಪ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಹಾಡು ಹಗಲೇ ಮನೆಗಳತನಕ್ಕೆ ಮುಂದಾದ ಕಳ್ಳ

**ಕೊಪ್ಪಳ :** ಕೊಪ್ಪಳ ನಗರದ ಭಾಗ್ಯನಗರ ರಸ್ತೆ ಪಾನಗಂಟಿ ಕಲ್ಯಾಣ ಮಂಟಪ ಹಿಂದಗಡೆ ಇರುವ ಅಗಡಿ ಲೇಔಟ್ ನಲ್ಲಿ ಹಾಡು ಆಗಲೇ ಮನೆ ಕಳ್ಳತನ ಮಾಡಲು ಮುಂದಾಗಿದ್ದಾನೆ

ಹೌದು ಮಧ್ಯಾಹ್ನ 1:30ಕ್ಕೆ ಮನೆಯಲ್ಲಿ ಬೀಗ ಹಾಕಿತ್ತು ಯಾರು ಇಲ್ಲದ ಸಮಯದಲ್ಲಿ ಬೀಗ ಹಾಕಿದ್ದನ್ನು ನೋಡಿ ಮನೆಯ ಕಾಂಪೌಂಡ್ ಸುತ್ತ ಸುತ್ತುತ್ತಾನೆ ಏನು ಸಿಗುತ್ತೆ ಎಂದು ಹುಡುಕುತ್ತಿದ್ದ ಮನೆಯ ಮೇಲ್ಗಡೆ ಹತ್ತಿ ಅಲ್ಲಿಯೂ ಕೂಡ ಹುಡುಕುತ್ತಿದ್ದ ಅಷ್ಟರಲ್ಲೇ ಮನೆಯ ಪಕ್ಕದವರು ಆತನನ್ನು ನೋಡಿದ್ದಾರೆ ತಕ್ಷಣ ಫೋಟೋವನ್ನು ತೆಗೆದು ಮನೆಯವರಿಗೆ ಕಳಿಸಿದ್ದಾರೆ ಮನೆಯವರು ಬರುವಷ್ಟೇ ಅಲ್ಲಿಂದ ಕಳ್ಳ ಎಸ್ಕೇಪ್ ಆಗಿದ್ದಾನೆ

ಕಳ್ಳನನ್ನು ಹುಡುಕಿಕೊಂಡು ಭಾಗ್ಯನಗರ ಕಡೆ ಹೋದಾಗ ಸಾಯಿಬಾಬನ ಗುಡಿ ಹತ್ತಿರ ಭಾಗ್ಯನಗರ ಕಡೆ ಹೋಗುತ್ತಿದ್ದ ಕೈಯಲ್ಲಿ ರಾಡ್ ವೈಯರ್ ಕಟ್ ಮಾಡುವ ಕಟರ್ ಮಿಷನ್ ಕೂಡ ಇತ್ತು ಇದನ್ನು ಗಮನಿಸಿ ಅವನ ಫೋಟೋವನ್ನು ತೆಗೆದುಕೊಂಡಿದ್ದಾರೆ ಕಳ್ಳ ಎಲ್ಲಿ ಹೋಗುತ್ತಾನೆ ಅಲ್ಲಿ ಆತನನ್ನ ಫಾಲೋ ಮಾಡಿಕೊಂಡು ಹೋಗುತ್ತಾರೆ ಅಷ್ಟರಲ್ಲಿ ಒಬ್ಬರ ಬೈಕ್ ಮೇಲೆ ಹತ್ತಿಕೊಂಡು ಕಳ್ಳ ಹೋಗುತ್ತಿದ್ದ ಆ ಬೈಕ್ ಎಲ್ಲಿ ಹೋಗುತ್ತೆ ಅದನ್ನು ಹಿಂಬಾಲಿಸಿಕೊಂಡು ಮನೆಯ ಮಾಲೀಕರು ಹೋದರು

ಕೆಲವು ದಿನಗಳ ಹಿಂದೆ ಪದಕಿ ಲೇಔಟ್ ನಲ್ಲಿರುವ ಮನೆ ಒಂದರಲ್ಲಿ ಸಿಲೆಂಡರ್ ಕಳ್ಳತನ ಮಾಡಿ ಓಜನಹಳ್ಳಿ ರಸ್ತೆಯಲ್ಲಿರುವ ಚಿಕನ್ ಅಂಗಡಿಗೆ 600ಗೆ ಮಾರಿದ್ದ ಕಳ್ಳನನ್ನು ನೋಡಿದ ಮಲಕರು ಅವನನ್ನು ಸಿಲೆಂಡರ್ ಯಾರಿಗೆ ಮಾರಿದ್ದೀಯಾ





ಅದನ್ನು ಕೊಡಿಸುವ ಎಂದು ಹೇಳುತ್ತಾರೆ ಚಿಕನ್ ಶಾಪ್ ಗೆ ಕರೆದುಕೊಂಡು ಹೋಗಿ ನಾನು ಚಿಕನ್ ಶಾಪ್ ಅವರಿಗೆ ಕೊಟ್ಟಿರುತ್ತೇನೆ ಎಂದು ಹೇಳುತ್ತಾನೆ ನಂತರ ಆತನನ್ನು ಮನೆಯ ಮಾಲೀಕರು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಪೊಲೀಸರಿಗೆ ಒಪ್ಪಿಸಲಾಯಿತು ಹಾಡು ಹಗಲಲ್ಲೇ ಇಷ್ಟೆಲ್ಲಾ ಕಳ್ಳತನ ನಡಿತಾ ಇದ್ದರೂ ಪೊಲೀಸ್ ಇಲಾಖೆ ಮಾನಕ್ಕೆ ಶರಣಾಗಿದೆ ಕೂಡಲೇ ಕಳ್ಳತನ ಮಾಡುವವರು ವಿರುದ್ಧ ಕಠಿಣ ಕ್ರಮ ಜರಗಿಸಬೇಕೆಂದು ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ.

# ಮಾಜಿ ಸಿಎಂ ಎಸ್.ಎಂ.ಕೃಷ್ಣ ನಿಧನ: ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ಶೋಕಾಚರಣೆ

**ಕೊಪ್ಪಳ :** ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ನಿಧನದ ಹಿನ್ನೆಲೆ ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ಮಂಗಳವಾರದಂದು ಶೋಕಾಚರಣೆಯನ್ನು ಮಾಡಲಾಯಿತು.

ಕನ್ನಡಿಗರ ರಾಜಧಾನಿ ಬೆಂಗಳೂರಿಗೆ 'ಐಟಿ' ತವರು ಎಂಬ ಬಿರುದು ಸಿಗಲು ಕಾರಣವಾಗಿದ್ದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಂದು ನಮ್ಮನ್ನೆಲ್ಲಾ ಬಿಟ್ಟು ಅಗಲಿದ್ದಾರೆ. ಕರ್ನಾಟಕದ ಕೀರ್ತಿ ಪತಾಕೆಯನ್ನು ಆಧುನಿಕ ಕಾಲ ಘಟ್ಟದಲ್ಲಿ ಜಗತ್ತಿನ ಮೂಲೆ ಮೂಲೆಗೂ ಹಬ್ಬಿಸಿದ್ದ ಕೀರ್ತಿ, ಹೆಮ್ಮೆ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರಿಗೆ ಸಲ್ಲಬೇಕಿದೆ ಎಂದು



ಕುಲಸಚಿವ ಪ್ರೊ. ಕೆ.ವಿ.ಪ್ರಸಾದ್ ಸಂತಾಪ ವ್ಯಕ್ತಪಡಿಸಿರುವ.

ಕರ್ನಾಟಕದ ಸಿಎಂ ಆಗಿ, ಕರ್ನಾಟಕ ರಾಜ್ಯದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳನ್ನು ಮಾಡಿ ಜಾಗತಿಕ ಮಟ್ಟದಲ್ಲಿ, ಕನ್ನಡ ನಾಡು ಗುರುತಿಸಿಕೊಳ್ಳಲು ಕೊಡುಗೆ ನೀಡಿದ ಎಸ್.ಎಂ. ಕೃಷ್ಣ ಅವರು ಚಿಕಿತ್ಸೆ ಫಲಿಸದೆ ಇಹಲೋಕ ತ್ಯಜಿಸಿದ್ದು, ಕನ್ನಡ ನಾಡಿನ ಕೋಟಿ ಕೋಟಿ ಅಭಿಮಾನಿಗಳನ್ನ ಕೂಡ ಅಗಲಿ ಹೋಗಿದ್ದಾರೆ ಎಂದು ಸಹಾಯಕ ಪ್ರಾಧ್ಯಾಪಕರಾದ ಚಾಂದ್ ಬಾಷಾ ಸಂತಾಪ ಸೂಚಿಸಿದರು.

ಕಾರ್ಯಕ್ರಮದಲ್ಲಿ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರಕಾಶ ಯಳವಟ್ಟಿ ಮತ್ತು ಪ್ರವೀಣ ಪೊಲೀಸ್ ಪಾಟೀಲ್, ಜಗದೀಶ್, ಕುಮಾರ ನಾಯಕ್, ಅಯ್ಯಪ್ಪ, ಸಂತೋಷ ಕುಮಾರ, ಪಾರ್ವತಿ, ಬಾಷಾ ವಿರೂಪಾಕ್ಷ, ಪಾಪಣ್ಣ, ಶ್ರೀಕಂತ್, ಸುಧಾಕರ್, ಗೀತಾ ಪಾಟೀಲ್ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

# ಉಚಿತ ಕೌಶಲ್ಯಾಧಾರಿತ ತರಬೇತಿಗೆ ಅರ್ಜಿ ಆಹ್ವಾನ

**ಕೊಪ್ಪಳ :** ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆಯಿಂದ ಉಚಿತ ಕೌಶಲ್ಯಾಧಾರಿತ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

18 ರಿಂದ 45 ವಯೋಮಾನದ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ, ಯುವತಿಯರಿಗಾಗಿ ಡಿಸೆಂಬರ್ 3ನೇ ವಾರದಲ್ಲಿ ಬಿದಿರಿನ ಅಲಂಕಾರ ವಸ್ತುಗಳ ತಯಾರಿಕೆ ತರಬೇತಿ ಆರಂಭವಾಗಲಿದ್ದು, ತರಬೇತಿ ಅವಧಿಯಲ್ಲಿ ಊಟ ಹಾಗೂ ವಸತಿಯು ಉಚಿತವಾಗಿರುತ್ತದೆ.

ಅಭ್ಯರ್ಥಿಗಳು ತಮ್ಮ ಹೆಸರು, ವಿಳಾಸಗಳನ್ನು ಕರೆ ಮೂಲಕ ಹಾಗೂ ವಾಟ್ಸಪ್ ಮಾಡುವುದರ ಮೂಲಕ ನೊಂದಾಯಿಸಿಕೊಳ್ಳಬಹುದು ಮೊದಲು ಬಂದವರಿಗೆ ಹಾಗೂ ಗ್ರಾಮೀಣ ಭಾಗದವರಿಗೆ ಮೊದಲ ಆದ್ಯತೆ ನೀಡಲಾಗುವುದು.

ತರಬೇತಿಯಲ್ಲಿ ಕೌಶಲ್ಯ, ಸಾಫ್ಟ್ ಸ್ಕಿಲ್ಸ್, ಯೋಗ ತರಬೇತಿ ಹಾಗೂ ಬ್ಯಾಂಕಿಂಗ್ ನಿಂದ ಸಾಲ ಪಡೆದು ಸ್ವ-ಉದ್ಯೋಗ ಪ್ರಾರಂಭಿಸಲು ಬೇಕಾಗುವ ಜ್ಞಾನ, ಸರಕಾರಿ ಯೋಜನೆಗಳು ಮತ್ತು ಯೋಜನಾ ವರದಿ ತಯಾರಿಕೆ ಇನ್ನೇತರ ಮಾಹಿತಿಯನ್ನು ಉಚಿತವಾಗಿ ನೀಡಲಾಗುವುದು.

ತರಬೇತಿಯಲ್ಲಿ ಭಾಗವಹಿಸಲು ಇಚ್ಛಿಸುವ ಆಸಕ್ತರು ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ, ದೂ.ಸಂ : 8970145354, 9483485489, 9482188780 ಗೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

## ಗ್ಯಾರಂಟಿ ಯೋಜನೆಯಿಂದ ಅಭಿವೃದ್ಧಿ ಕಾರ್ಯಗಳಿಗೆ ಹಣದ ಕೊರತೆಯಾಗಿಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ

**ಬೆಳಗಾವಿ ಸುವರ್ಣಸೌಧ :** ಗ್ಯಾರಂಟಿ ಯೋಜನೆಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯ ಕುಂಠಿತವಾಗಿಲ್ಲ, ರಾಜ್ಯದಲ್ಲಿ 2023–24 ರಲ್ಲಿ ಅಭಿವೃದ್ಧಿ ವೆಚ್ಚಗಳಿಗಾಗಿ 2,14,292 ಕೋಟಿ ರೂ ವೆಚ್ಚ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅವರು ಇಂದು ವಿಧಾನ ಪರಿಷತ್ತಿನಲ್ಲಿ ಸದಸ್ಯ ಕೆ. ಎ. ತಿಪ್ಪೇಸ್ವಾಮಿ ಅವರ ಚುಕ್ಕೆಗುರುತಿನ ಪ್ರಶ್ನೆಗೆ ಉತ್ತರಿಸಿದರು.

ಸರ್ಕಾರವು 5 ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಗೊಳಿಸಲು ಸದ್ರಿ ಯೋಜನೆಗಳಿಗೆ ಆಯವ್ಯಯ ದಲ್ಲಿ 52,009 ಕೋಟಿ ರೂ ಗಳನ್ನು ಒದಗಿಸಿದೆ.

ರಾಜ್ಯ ಸರ್ಕಾರವು 2023–24 ರಲ್ಲಿ 90,280 ಕೋಟಿ ರೂ ಗಳನ್ನು ಸಾಲ ಪಡೆದಿದ್ದು, ರಾಜ್ಯದ ವಿತ್ತೀಯ ಕೊರತೆ 2.6% ಇದ್ದು, ರಾಜ್ಯ ಸರ್ಕಾರವು ಪಡೆದ ಒಟ್ಟು ಸಾಲ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮದ ಮಾನದಂಡ ಮತ್ತು ಕೇಂದ್ರ ಸರ್ಕಾರ ನಿಗಧಿಪಡಿಸಿರುವ ಸಾಲಮಿತಿಗೆ ಒಳಪಟ್ಟಿದೆ ಎಂದರು.

ರಾಜ್ಯ ಸರ್ಕಾರವು ರಾಜಸ್ವ ಹಾಗು ಬಂಡವಾಳ ಸ್ವೀಕೃತಿಗಳಿಂದ ಮತ್ತು ಕೇಂದ್ರ ಸರ್ಕಾರ ನಿಗದಿಪಡಿಸುವ ಮಿತಿಯೊಳಗೆ ಸಾಲವನ್ನು ಪಡೆಯುವ ಮೂಲಕ ಆಯವ್ಯಯದಲ್ಲಿ ಅಂದಾಜಿಸಿರುವ ವೆಚ್ಚವನ್ನು ಭರಿಸುತ್ತದೆ. ಈ ಸ್ವೀಕೃತಿಗಳನ್ನು ಮೀರಿ ಈವರೆಗೂ ಯಾವುದೇ ವೆಚ್ಚದ ಹೊರೆ ರಾಜ್ಯ ಸರ್ಕಾರಕ್ಕೆ ಉಂಟಾಗಿರುವುದಿಲ್ಲ ಎಂದರು.

ಗ್ಯಾರಂಟಿ ಯೋಜನೆಗಳಿಂದ ರಾಜ್ಯ ಅಭಿವೃದ್ಧಿ ಕುಂಠಿತವಾಗಿದೆ ಎಂಬ ವಿರೋಧ ಪಕ್ಷಗಳ ಆರೋಪ ಸುಳ್ಳು ಹಾಗೂ ಸತ್ಯಕ್ಕೆ ದೂರವಾಗಿದ್ದು ಈ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದು ಸ್ಪಷ್ಟಪಡಿಸಿದರು.

# ಗೋಲಭಾವಿಯಲ್ಲಿ ಮಹಾಪೂಜೆ, ಅಗ್ನಿಪೂಜೆ

**ತೇರದಾಳ :** ತಂತ್ರಜ್ಞಾನ ಬೆಳೆದಂತೆ ಯುವಕರು ಆಧ್ಯಾತ್ಮದ ಕಡೆಗೆ ಒಲವು ಕಡಿಮೆ ತೋರಿಸುತ್ತಿದ್ದಾರೆ. ಆದರೆ ಗ್ರಾಮೀಣ ಪ್ರದೇಶದ ಯುವಕರಲ್ಲಿ ಧಾರ್ಮಿಕತೆ ಹೆಚ್ಚುತ್ತಿರುವುದು ಸಂತಸದ ಸಂಗತಿಯಾಗಿದೆ ಎಂದು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ಹೇಳಿದರು.

ಗೋಲಭಾವಿ ಗ್ರಾಮದಲ್ಲಿ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿಯವರು ಹಮ್ಮಿಕೊಂಡಿದ್ದ 18 ನೇ ವರ್ಷದ ಅಯ್ಯಪ್ಪ ಸ್ವಾಮಿ ಮಹಾಪೂಜೆ ಹಾಗೂ ಅಗ್ನಿಪೂಜೆಯ ಧರ್ಮ ಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಆಧ್ಯಾತ್ಮವನ್ನು ಶ್ರದ್ಧೆ ಭಕ್ತಿಯಿಂದ ಆಚರಿಸಿದಾಗ ಮಾತ್ರ ಅದರ ಮಹತ್ವ ಹೆಚ್ಚಾಗುತ್ತದೆ. ಆದ್ದರಿಂದ ಕಾಟಾಚಾರಕ್ಕೆ ಆಧ್ಯಾತ್ಮ ಕೈಗೊಳ್ಳದೆ ಭಕ್ತಿಪೂರ್ವಕವಾಗಿ ನಡೆದುಕೊಳ್ಳುವ ಮೂಲಕ ಆಧ್ಯಾತ್ಮದ ಶಕ್ತಿ ಪಡೆದುಕೊಳ್ಳಬೇಕೆಂದು ಹೇಳಿದರು.

ಕೊಣ್ಣೂರ ಕಲ್ಯಾಣ ಹೊರಗಿನಮಠದ ಡಾ. ವಿಶ್ವಪ್ರಭು ಶಿವಾಚಾರ್ಯ ತೇರದಾಳ



ಹಿರೇಮಠದ ಗಂಗಾಧರ ದೇವರು ಮಾತನಾಡಿ, ಜೀವನದಲ್ಲಿ ಎಷ್ಟೇ ಏಳು ಬೀಳು ಬಂದರೂ ಧರ್ಮ ಬಿಡಬೇಡಿ. ತಾಳ್ಮೆ ಹೊಂದಿದವರಿಗೆ ಬದುಕಿನಲ್ಲಿ ನೆಮ್ಮದಿ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ಹೇಳಿದರು.

ಬಬಲಾದಿ ಅಪ್ಪಯ್ಯ ಹಿರೇಮಠ, ರಾಜೇಂದ್ರ ಗುಡಗುಂಟಿಮಠ, ಮಲ್ಲಪ್ಪ ಗುರವ, ಶಿವಗೊಂಡ ಸನದಿ, ಪ್ರಕಾಶ ಯರಗುದ್ರಿ, ಗಿರಮಲ್ಲ ಸಿದ್ದಾಪುರ, ಮಹಾನಿಂಗಯ್ಯ ಮಠದ, ಭೀಮಸಿ ಹುನ್ನೂರ ಸೇರಿದಂತೆ ಅಯ್ಯಪ್ಪ ಸೇವಾ ಸಮಿತಿಯವರು ಪಾಲ್ಗೊಂಡಿದ್ದರು.

ಇದಕ್ಕೂ ಮೊದಲು ಗ್ರಾಮದ ಪ್ರಮುಖ ಬೀದಿಗಳಲ್ಲಿ ವಾದ್ಯಮೇಳಗಳೊಂದಿಗೆ ಅಯ್ಯಪ್ಪ ಸ್ವಾಮಿ ಭವ್ಯ ಮೆರವಣಿಗೆ, ಮಹಾಪೂಜೆ, ಅಗ್ನಿಪೂಜೆ ಭಕ್ತಿಯ ಪರಾಕಾಷ್ಟೆಗೆ ಸಾಕ್ಷಿಯಾಯಿತು. ತೇರದಾಳ, ಕಾಲತಿಪ್ಪಿ, ಯರಗಟ್ಟಿ, ಹನಗಂಡಿ, ರಬಕವಿ–ಬನಹಟ್ಟಿ ಹೀಗೆ ಬೇರೆ ಬೇರೆ ಊರುಗಳಿಂದ ಭಕ್ತರು ಆಗಮಿಸಿದ್ದರು.

# ಶರಣರ ಅನುಭಾವ ಮನುಷ್ಯನಿಗೆ ಪ್ರಸಾದವಾಗಲಿ

**ಗುಳೇದಗುಡ್ಡ :** ಸಂತ ಮಹಾತ್ಮರ, ಶರಣರ ಅನುಭಾವ ಎಲ್ಲರ ಬದುಕಿಗೆ ಪ್ರಸಾದವಾಗಬೇಕು. ಪ್ರವಚನ ಎಂದರೆ ಅದು ಪ್ರಸಾದ. ಕೇಳಿದ ಅನುಭಾವ ಜೀವನದಲ್ಲಿ ಸಾಕಾರಗೊಳಿಸಿಕೊಳ್ಳಬೇಕು. ಶರಣರ ಆದರ್ಶ ಚಿಂತನೆಗಳು ವ್ಯಕ್ತಿ ಜೀವನಕ್ಕೆ ಬೆಳಕು ತರುತ್ತವೆ. ಮನುಷ್ಯ ಮನುಷ್ಯರು ಬಸವಾದಿ ಪ್ರಮಥರು ಸಾರಿ ಹೋದ ಆದರ್ಶ ತತ್ವ ಸಿದ್ಧಾಂತಗಳನ್ನು, ಸಮ ಸಮಾಜದ ಮಹತ್ವದ ಸಂದೇಶವನ್ನು ನಾವೆಲ್ಲ ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿಸಿಕೊಂಡು ಜೀವನ ಪಥ ನಡೆಬೇಕು. ಅಂ–ದಾಗ ಮನುಷ್ಯನ ಬದುಕಿನಲ್ಲಿ ಹೊಸದೊಂದು ಬೆಳಕು ಕಾಣಲು ಸಾಧ್ಯವಾಗುತ್ತದೆ.

ಜಗತ್ತಿನಲ್ಲಿ ನಾವು ಎಲ್ಲವನ್ನು ದುಡ್ಡುಕೊಟ್ಟು ಕೊಂಡುಕೊಳ್ಳಬಹುದು. ಆದರೆ ಅನುಭಾವವನ್ನು ಪಡೆದುಕೊಳ್ಳಲು ಎಂದಿಗೂ ಸಾಧ್ಯವಿಲ್ಲ. ಮಾನವ ಜೀವನದಲ್ಲಿ ಏನು ಬೇಕು ಎಲ್ಲವನ್ನು ನಮ್ಮ ಸುಖಕ್ಕೆ



ಭೌತಿಕವಾದ ಪ್ರಪಂಚದಲ್ಲಿ ಪಡೆದುಕೊಳ್ಳಬಹುದು. ಆದರೆ ಅಂತರಂಗದಲ್ಲಿ ಇರುವ ಕತ್ತಲೆಗೆ ಬೆಳಕು ಸಿಗಬೇಕಾದರೆ ಬಹಳ ಕಷ್ಟ. ಹಣ ಗಳಿಸಬಹುದು. ಮನೆ ಮಾಡಬಹುದು. ವಿದ್ಯೆ ಕಲಿಯಬಹುದು. ಬದುಕಿನೊಳಗೆ ನಿಮ್ಮ ಬದುಕನ್ನು ಎಲ್ಲವನ್ನೂ ಬದಲಾಯಿಸಿಕೊಳ್ಳಬಹುದು. ಆದರೆ ಅಪರಾ ವಿದ್ಯೆ ತಿಳಿದುಕೊಳ್ಳುವುದು ಬಹಳವಿದೆ. ಮನುಷ್ಯನಿಗೆ 'ಕಾಮ' ಅನ್ನುವುದು ಬಯಕೆ. ಅದು ಸೆಕ್ಸ್ ಅಲ್ಲ. ಕೇವಲ ಎರಡು ದೇಹಗಳ ಸಂಬಂಧದ ವ್ಯಾಪಾರವಲ್ಲ. ಜಗತ್ತಿನಲ್ಲಿ ಎರಡು ಹೃದಯಗಳ ಸಮ್ಮಿಲನ ಅದು. ಲಿಂಗದಲ್ಲಿ ಪ್ರೀತಿ ಇರಬೇಕು. ಮನುಷ್ಯ ಯಾವಾಗಲೂ ತನ್ನ ಮನಸ್ಸು, ತನ್ನ ವಿವೇಕ, ತನ್ನ ಚಿಂತನೆ, ತನ್ನ ಬದುಕನ್ನು ಕಟ್ಟಿಕೊಳ್ಳುವಲ್ಲಿ ಸೋತಿದ್ದಾನೆ. ಏಕೆಂದರೆ ಆತನಿಗೆ ಮಹಾತ್ಮರ, ಶರಣ–ರ ಸನ್ನಿಧಿ ದೊರೆತಿಲ್ಲ ಅನ್ನುವುದು.

ಮನೆಯಲ್ಲಿ ಸಂಪತ್ತು, ಬಂಗಾರ, ಒಡವೆ, ಆಸ್ತಿ ಎಲ್ಲವೂ ಇದೆ. ಆದರೆ ಮನುಷ್ಯನಿಗೆ ಹೇಗೆ ಬದುಕಬೇಕು, ಜೀವನವನ್ನು ಹೇಗೆ ಕೊನೆವರೆಗೆ ನಡೆಸಿಕೊಂಡು ಹೋಗಬೇಕು ಎನ್ನುವ ಸಂಸ್ಕಾರ ಮಾತ್ರ ಗೊತ್ತಿಲ್ಲ. ಅನುಭಾವದ ಕೊರತೆ ಇದೆ. ಪ್ರತಿದಿನ ಮನುಷ್ಯ ಅನುಭಾವವನ್ನು ಮಾಡಬೇಕು. ನೋಡುವ ದೃಷ್ಟಿ ಬದಲಾಗಬೇಕು. ಮನುಷ್ಯನ ಜೀವನದಲ್ಲಿ ಬುದ್ಧಿವಂತಿಕೆಯಿಂದ ಏನೆಲ್ಲವನ್ನು ಗಳಿಸಬಹುದು. ಎಂತಹ ವ್ಯವಸ್ಥೆಯನ್ನೂ ಕಲ್ಪಿಸಿಕೊಳ್ಳಬಹುದು. ಆದ–ರೆ, ಮನುಷ್ಯನ ಅಂತರಂಗಕ್ಕೆ ಬೆಳಕು ನೀಡುವ ಅನುಭಾವ ಗಳಿಸುವುದು ಬಹಳಷ್ಟು ಶ್ರೇಷ್ಠ ವ್ಯವಸ್ಥೆಯಾಗಿದೆ.

ಶರಣರ ಅನುಭಾವ ದರ್ಶನ ವ್ಯಕ್ತಿ ಬದುಕನ್ನು ಶುಚಿಗೊಳಿಸುತ್ತದೆ. ಶರಣ ಅನ್ನುವ ಶಬ್ದ ನಮಗೆ ಅನುಭಾವ ಆಗಬೇಕು. ಬಸವಣ್ಣನವರು ಹಾಕಿಕೊಟ್ಟ ಅನುಭಾವ ನಮ್ಮ ಬದುಕಿಗೆ ಹೂರಣವಾಗಲಿ.

ಮಹಾತ್ಮರ ದಾರಿಯಲ್ಲಿ ನಾವೆಲ್ಲ ಜೀವನದಲ್ಲಿ ಅಳವಡಿಸಿಕೊಂಡರೆ ಬದುಕು ಪಾವನವಾಗುತ್ತದೆ. ಮಾನವ ಮಹಾದೇವನಾಗುತ್ತಾನೆ.

ಮನುಷ್ಯನಿಗೆ ಎಷ್ಟೆ ಕಷ್ಟ, ನೋವು, ದು:ಖ ಬಂದರೂ ವ್ಯಕ್ತಿ ಜೀವನ ಉತ್ಸಾಹ ಕಳೆದುಕೊಳ್ಳಬಾರದು. ಅನುಭಾವ ಮನುಷ್ಯನಿಗೆ ಜೀವನ ಉದ್ದೀಪನಗೊಳಿಸುತ್ತದೆ. ದೇವರನ್ನು ನೋಡಲು ನಮಗೆ ಸಾಧ್ಯವಿಲ್ಲ. ಆದರೆ ಈ ಜಗತ್ತಿನಲ್ಲಿ ದೇವರ ಪ್ರತಿನಿಧಿಯಾಗಿರುವ ನಿರ್ವಂಚನೆಯ, ನಿರ್ಮೋಹದ ಭಕ್ತರ ಪ್ರೀತಿ ಗೆಲ್ಲುವುದು ಬಹಳ ಕಷ್ಟ. ಮನುಷ್ಯ ಗ್ರಹಸ್ಥ ಜೀವನದಲ್ಲಿ ಇದ್ದುಕೊಂಡು ಬದುಕಿನಲ್ಲಿ ಸಂಯಮ, ತಾಳ್ಮೆ ಗಳಿಸಬೇಕು. ಅಂದಾಗ ಜೀವನದಲ್ಲಿ ಉತ್ತುಂಗಕ್ಕೆ ಏರಲು ಸಾಧ್ಯವಾಗುತ್ತದೆ.

# ಲಕ್ಷ್ಯಾಂತರ ಭಕ್ತರಿಂದ ಅಂಜನಾದ್ರಿಯಲ್ಲಿ ಹನುಮಮಾಲ ವಿಸರ್ಜನೆ



**ಕೊಪ್ಪಳ:** ಆಂಜನೇಯಸ್ವಾಮಿ ಜನ್ಮಸ್ಥಳ ಅಂಜನಾದ್ರಿಯಲ್ಲಿ ಹನುಮಮಾಲ ವಿಸರ್ಜನೆ ಕಾರ್ಯಕ್ರಮ ಲಕ್ಷ್ಯಾಂತರ ಹನುಮ ಮಾಲಾಧಾರಿಗಳಿಂದ ಶುಕ್ರವಾರ ಜರುಗಿತು. ಗುರುವಾರದಿಂದಲೇ ಆರಂಭವಾದ ಹನುಮಮಾಲಾ ವಿಸರ್ಜನೆ ಕಾರ್ಯಕ್ರಮ. ಶುಕ್ರವಾರ ಹೆಚ್ಚಿನ ಸಂಖ್ಯೆಯಲ್ಲಿ ಆಂಜನೇಯ ಸ್ವಾಮಿಯ ಭಕ್ತರು ಆಗಮಿಸಿದ್ದರು. ಬೆಳಂ ಬೆಳಿಗ್ಗೆ ಎಲ್ಲರೂ ನೀರಿನಲ್ಲಿ ಮಿಂದೆದ್ದು ಜಯಘೋಷಗಳನ್ನು ಕೂಗುತ ಸರತಿ ಸಾಲಿನಲ್ಲಿ ನಿಂತು ಆಂಜನೇಯ ಸ್ವಾಮಿಯ ದರ್ಶನ ಪಡೆಯುತ್ತಿದ್ದದು ಕಂಡು ಬಂತು.

ಕೊಪ್ಪಳ ಜಿಲ್ಲೆ ಮಾತ್ರವಲ್ಲದೆ ಅಕ್ಕ–ಪಕ್ಕದ ಜಿಲ್ಲೆ ಮತ್ತು ಇತರೆ ರಾಜ್ಯಗಳಿಂದಲು ಹನುಮಮಾಲಧಾರಿ ಆಗಮಿಸಿದ್ದರು. ರಸ್ತೆಯಗಳಲ್ಲಿ ಕಾಲ್ನಡಿಗೆ ಮುಖಾಂತರ ತಂಡೋಪ ತಂಡವಾಗಿ ಮತ್ತು ದೂರದ ಊರಿನಿಂದ ಬರುವ ಜನರು ವಾಹನಗಳಲ್ಲಿ ಬರುತ್ತಿರುವುದು ಕಂಡು ಬಂದಿತು. ಈ ಕಾರ್ಯಕ್ರಮಕ್ಕೆ ಬರುವ ಭಕ್ತಾದಿಗಳಿಗೆ ಯಾವುದೇ ತೊಂದರೆಯಾಗದಂತೆ ಕೊಪ್ಪಳ ಜಿಲ್ಲಾಡಳಿತ ಉತ್ತಮ ರೀತಿಯಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಮಾಡಿತ್ತು. ಭಕ್ತರಿಗೆ ಪ್ರಸಾದಕ್ಕಾಗಿ ವೇದಪಾಠ ಶಾಲೆಯ ಆವರಣದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಹುಗ್ಗಿ, ಅನ್ನ, ಸಾಂಬರ್, ಟೊಮಟೊ ಚಟ್ನಿ ಒಳಗೊಂಡ ಪ್ರಸಾದವನ್ನು ಭಕ್ತರು ಸವಿದರು. ಜನರಿಗೆ ನೂಕು ನುಗ್ಗಲು ಆಗದಂತೆ ಹಲವಾರು ಕೌಂಟರಗಳನ್ನು ತೆರೆದಿದ್ದರಿಂದ ಶಾಂತ ರೀತಿಯಲ್ಲಿ ಪ್ರಸಾದ ಸ್ವೀಕಾರಕ್ಕೆ ಅನುಕೂಲವಾಯಿತು. ಎಲ್ಲಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ, ಅಡುಗೆ ಚೆನ್ನಾಗಿ ಆಗಿದೆ ಎಂದು ಜನರು ಮಾತನಾಡುತ್ತಿದ್ದರು.

ಟ್ರಾಫಿಕ್ ಸಮಸ್ಯೆಯಾಗದಂತೆ ಮುಂಚಿತವಾಗಿ ಪೊಲೀಸರು ಪಾರ್ಕಿಂಗ್ ಸ್ಥಳ ನಿಗದಿಪಡಿಸಿದರಿಂದ ಯಾವುದೇ ಟ್ರಾಫಿಕ್ ಸಮಸ್ಯೆಗಳಾಗಲಿಲ್ಲ. ಕಾರ್ಯಕ್ರಮ ಸೂವ್ಯವಸ್ಥಿತವಾಗಿ ನಡೆಯಲು ರಚಿಸಲಾದ ವಿವಿಧ ಸಮತಿಗಳ ಕೆಲಸ ಕಾರ್ಯಗಳು ಹೇಗೆ ನಡೆಯುತ್ತಿವೆ ಎಂದು ಜಿಲ್ಲಾಧಿಕಾರಿಗಳು ಆಗಾಗ ಪರಿಶೀಲನೆ ನಡೆಸುತ್ತಿದ್ದರು. ವೈದ್ಯಕೀಯ ತಂಡಗಳು. ಪೊಲೀಸ್. ಕಂದಾಯ ಇಲಾಖೆ ಸೇರಿದಂತೆ ಇತರೆ ವಿವಿಧ ಇಲಾಖೆಯ ಅಧಿಕಾರಿಗಳು. ತಮಗೆ ವಹಿಸಿದ ಕೆಲಸಗಳನ್ನು ಜವಾಬ್ದಾರಿಯಿಂದ ನಿಭಾಯಿಸಿದರಿಂದ ಭಕ್ತರಿಗೆಯಾವುದೇ ಸಮಸ್ಯೆಗಳಾಗಲಿಲ್ಲ. ಆಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಅದರ ಕೆಳಗಡೆ ಇರುವ ಪಾದಗಟ್ಟೆಯಲ್ಲಿ ಹೂವಿನ ಅಲಂಕಾರ ಕಳೆದ ವರ್ಷಕ್ಕಿಂತಲೂ ಈ ವರ್ಷ ಚೆನ್ನಾಗಿ ಮಾಡಲಾಗಿತ್ತು. ಅಂಜನಾದ್ರಿ ಬೆಟ್ಟಕ್ಕೆ ವಿವಿಧ ಬಣ್ಣಗಳ ಲೈಟಿಂಗ್ ವ್ಯವಸ್ಥೆ ಮಾಡಿದ್ದರಿಂದ ಬೆಟ್ಟವು ರಾತ್ರಿ ಕಂಗೊಳಿಸುತ್ತಿತ್ತು.

ನಡೆದುಕೊಂಡು ಬರುವ ಹನುಮಮಾಲಾಧಾರಿಗಳಿಗೆ ಅನುಕೂಲವಾಗಲು ರಸ್ತೆಗಳ ಮಾರ್ಗ ಮಧ್ಯದ ಅಲ್ಲಲ್ಲಿ ಟೆಂಟ್‌ಗಳನ್ನು ಹೊಡೆದು ವಿಶ್ರಾಂತಿ ಸ್ಥಳಗಳನ್ನು ಮಾಡಲಾಗಿತ್ತು. ಕೆಲವು ಗ್ರಾಮಗಳಲ್ಲಿ ಭಕ್ತರಿಗೆ ಅನ್ನಪ್ರಸಾದ ವ್ಯವಸ್ಥೆ ಮಾಡಿರುವುದು ಮಾರ್ಗಮಧ್ಯದಲ್ಲಿ ಕಂಡು ಬರುತಿತ್ತು. ನಗರಸ್ಥಳೀಯ ಸಂಸ್ಥೆಗಳ ವತಿಯಿಂದ ಎಲ್ಲಾ ಕಡೆ ಸ್ವಚ್ಛತೆ ಕಾಪಡಲು ಹಲವಾರು ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿತ್ತು. ಪೊಲೀಸವರು ವಾಹನಗಳನ್ನು ಪಾರ್ಕಿಂಗಗಾಗಿ ನಿಗದಿಪಡಿಸಿದ ಸ್ಥಳಗಳಲ್ಲಿ ವಾಹನಗಳನ್ನು ನಿಲ್ಲಿಸುವಂತೆ ಬರುವ ವಾಹನಗಳಿಗೆ ನಿರ್ದೇಶನ ನೀಡುತ್ತಿದ್ದರು. ಪ್ರಮುಖ ರಸ್ತೆಗಳು, ಅಂಜನಾದ್ರಿಯ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿಗಳನ್ನು ಅಳವಡಿಸಿ ಕಾನೂನು ಸುವ್ಯವಸ್ಥೆ ಕಾಪಾಡಲು ವಿಶೇಷ ನಿಗಾ ವಹಿಸಲಾಗಿತ್ತು.

ಅಂಜನಾದ್ರಿಗೆ ಲಕ್ಷ್ಯಾಂತರ ಸಂಖ್ಯೆಯಲ್ಲಿ ಭಕ್ತರು ಬರುವ ನಿರೀಕ್ಷೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತವು ಎಲ್ಲಾ ರೀತಿಯ ಸೌಕರ್ಯಗಳ ವ್ಯವಸ್ಥೆಯನ್ನು ಕಲ್ಪಿಸಿತ್ತು. ಕುಡಿಯುವ ನೀರು, ಸ್ನಾನಗೃಹಗಳು, ವಾಹನಗಳಿಗೆ ಪಾರ್ಕಿಂಗ್, ಪ್ರಸಾದ ವ್ಯವಸ್ಥೆ, ಸಾರಿಗೆ ವ್ಯವಸ್ಥೆ, ಸಹಾಯವಾಣಿ, ಅಗತ್ಯ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ನಿಯೋಜನೆ ಸೇರಿದಂತೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಕಲ್ಪಿಸಲಾಗಿದ್ದರಿಂದ ಹನುಮ ಮಾಲಾಧಾರಿಗಳು ಸೇರಿದಂತೆ ಎಲ್ಲರಿಗೂ ಅನುಕೂಲವಾಯಿತು. ಈ ಮೂಲಕ ಡಿಸೆಂಬರ್ 12 ಮತ್ತು ಡಿಸೆಂಬರ್ 13ರಂದು ಎರಡೂ ದಿನಗಳ ಕಾಲ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಜಿಲ್ಲೆಯ ಸಚಿವರು, ಸಂಸದರು, ಶಾಸಕರು ಹಾಗೂ ಇತರೆ ಜನಪ್ರತಿನಿಧಿಗಳ ಸಹಕಾರ ಮತ್ತು ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪಂಚಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ ಹಾಗೂ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ ಹಾಗೂ ಇತರ ಅಧಿಕಾರಿಗಳು ಅಂಜನಾದ್ರಿ ಬೆಟ್ಟಕ್ಕೆ ನಿರಂತರವಾಗಿ ಭೇಟಿ ನೀಡಿ ಅಲ್ಲಿನ ಕೆಲಸ ಕಾರ್ಯಗಳ ಬಗ್ಗೆ ಪರಿಶೀಲಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಯುವಂತೆ ನೋಡಿಕೊಂಡರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State